೨೪೯ ಉಪನ್ಯಾಸ ಗ್ರಂಥಮಾಲೆ

ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರ

ಪ್ರಿ. ಎ. ಎಂ. ಯರನಾಳ

ಕರ್ನಾಟಕ ವಿಶ್ವವಿದ್ಯಾಲಯ

ಅಕ್ಟೋಬರ, ೧೯೭೬

ರಜತಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೪೯

ಗ್ರಾಮಾಂತರ ಪ್ರದೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರ

ಪ್ರಿ. ಎ. ಎಂ. ಯರನಾಳ

ಎಂ. ಕಾಂ.(ಕಾಸ್ಟ), ಎಂ. ಕಾಂ.(ಬ್ಯಾಂಕ)

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಅಕ್ಟೋಬರ, ೧೯೭೬

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು :

ಪ್ರಸಾರಾಂಗ ಪ್ರಕಟಣ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಅಕ್ಟೋಬರ, ೧೯೭೬

ಬೆಲೆ : ೨೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ.
ಧಾರವಾಡ-೫೮೦೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನ ಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವ-ವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳ ಲ್ಲಿಯೂ ಉಪನ್ಯಾಸ ಶಿಬಿರಗಳನ್ನು' ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಾಂಡಾರದ ಅಲ್ಪಾಂಶವನ್ನಾದರೂ ಮಹಾ ಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೬೦ಲ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ಪ್ರಸ್ತಾವನೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಶಾಖೆಯ ೨೨೨ನೆಯ ಶಿಬಿರವು ಐತಿಹಾಸಿಕ ಪ್ರಸಿದ್ಧವಾದ ವಿಜಯಪುರ ಜಿಲ್ಲೆಯ ಅಗರಖೇಡದಲ್ಲಿ ಫೆಬ್ರುವರಿ ೧೧-೨-೧೯೭೬ ರಂದು ಜರುಗಿತು. ಹಿತ, ಮಿತ ಭಾಷೆಯ ಅಲ್ಲಿಯ ಜನರ ಕೂಡ ಬೆರೆತು ಅವರ ಕೆಲವೊಂದು ಪತ್ತಿನ ಮತ್ತು ಹಣಕಾಸಿನ ಸಮಸ್ಯೆಗಳ ಚರ್ಚೆಯ ಸಾರವನೆಲ್ಲ ಈ ಕಿರುಹೊತ್ತಿಗೆಯ ಮುಖಾಂತರ ತರುತ್ತಿರುವದು ಆನಂದದ ವಿಷಯ. ಅಂದು ನಾನು "ಗ್ರಾಮಾಂತರ ಪ್ರದೇಶದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರ" ಎಂಬುದರ ಮೇಲೆ ಚರ್ಚಿಸಿದೆನು.

ಅಗರಖೇಡದಂಥ ಸಣ್ಣ ಹಳ್ಳಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಒಂದು ಶಾಖೆಯಿದ್ದು ಅದರ ಒಗ್ಗೆಯೇ ಜಿಗುಪ್ಸೆ ತಳೆದ ಎಷ್ಟೋ ಜನರ ಕೂಡ ಚರ್ಚಿಸಿ ಅವರ ಮೂಢ ನಂಬಿಕೆ, ಬ್ಯಾಂಕಿನ ಬಗ್ಗೆ ಇದ್ದ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಸಾಧ್ಯವಿದ್ದಷ್ಟು ಪ್ರಯತ್ನ ಪಟ್ಟೆ. ಎರಡು ದಿವಸಗಳ ವರೆಗೆ ಅವರ ಪ್ರಶ್ನೆಗಳಿಗೆ ವ್ಯಾವಹಾರಿಕ ದೃಷ್ಟಿ ಕೋನದಿಂದ ಉತ್ತರಕೊಟ್ಟು ನಮ್ಮ ವ್ಯಾಸಂಗ ವಿಸ್ತರಣ

ಶಾಖೆಯ ಮನದಿಚ್ಛೆಯನ್ನು ಪೂರೈಸುವದರಲ್ಲಿ ಅಲ್ಪ ಸ್ವಲ್ಪ
ನನಗೆ ಸಾಧ್ಯವಾಯಿತೆಂದು ಹೇಳಿದರೂ ಅಡ್ಡಿ ಇಲ್ಲ.

ನಮ್ಮ ರಾಷ್ಟ್ರದ ಜೀವಾಳ ಹಳ್ಳಿಗಳು. ಅವುಗಳನ್ನು
ನಿರ್ಲಕ್ಷಿಸಿದರೆ ಇಡೀ ರಾಷ್ಟ್ರದ ಬೆಳವಣಿಗೆಯನ್ನೇ ನಿರ್ಲಕ್ಷಿಸಿ
ದಂತೆ ಎಂದು ನಾನು ತಿಳಿದಿದ್ದೇನೆ. ಹಳ್ಳಿಗಳ ಸರ್ವಾಂಗೀಣ
ಉನ್ನತಿಯು ಬರಿಯ ಘೋಷಣೆಯಿಂದ ಸಾಧ್ಯವಿಲ್ಲ.
ಅಲ್ಲಿಯ ನಿಜವಾದ ಸಮಸ್ಯೆಯನ್ನು ಅರಿತು ಅದನ್ನು ಪರಿ
ಹರಿಸುವದರಲ್ಲಿ ತೊಡಗಬೇಕು. ಇಂದು ಹಳ್ಳಿಗಳ ನಿಜ
ಸಮಸ್ಯೆ ಎಂದರೆ ಬಂಡವಾಳ. ಈ ಬಂಡವಾಳದ ಕೊರತೆ
ಯಿಂದ ನಮ್ಮ ರಾಷ್ಟ್ರದ ಸೊತ್ತು ಎಂದಂಥಾ ಸಣ್ಣ ಕೈಗಾರಿಕೆ
ಗಳು, ಕುಶಲ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ
ಒಕ್ಕಲುತನ ನಶಿಸಿ ರಾಷ್ಟ್ರದ ಆರ್ಥಿಕ ಬೆಳವಣಿಗೆಯ ಮೇಲೆ
ಕೊಡಲಿಯ ಪೆಟ್ಟು ಹಾಕಿದೆ ಎಂದು ಹೇಳಬಹುದು.
ಕಾರಣ ಈ ಸಮಸ್ಯೆಯ ಪರಿಹಾರದಲ್ಲಿ ನಮ್ಮ ರಾಷ್ಟ್ರೀಕೃ
ಬ್ಯಾಂಕುಗಳ ಪಾತ್ರವೇನು ಎಂಬುದನ್ನು ಇಲ್ಲಿ ವಿಶ್ಲೇಷಿ
ಲಾಗಿದೆ. ಈ ಪ್ರಶ್ನೆಯೇನೋ ಗಡುಚಾಗಿದ್ದು ಆದಷ
ಪ್ರಯತ್ನಪಟ್ಟು ಈ ಕಿರುಹೊತ್ತಿಗೆಯಲ್ಲಿಯೇ ವಿಶದಪಡಿಸಲ
ಪ್ರಯತ್ನಪಟ್ಟಿದ್ದೇನೆ.

ಅನೇಕ ದಿವಸಗಳಿಂದ ಇಂತಹ ವಿಷಯಗಳ ಮೇ
ಹಳ್ಳಿ ಬಂಧುಗಳ ಕೂಡ ಚರ್ಚಿಸಬೇಕೆಂಬ ನನ್ನ ಮನದಿ
ಯನ್ನು ಈಡೇರಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯ

ಅಧಿಕಾರಿಗಳಿಗೆಲ್ಲ— ಮುಖ್ಯತಃ ಪ್ರಕಟನ ಶಾಖೆಯ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ, ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಲೇಖನವನ್ನು ಓದಿ, ಭಾಷೆಯ ದೀಕ್ಷೆಕೊಟ್ಟ ನನ್ನ ಮಿತ್ರ ಶ್ರೀ ಜಿ. ಎಸ್. ವಡಗಾಂವಿಯವರಿಗೂ ಮತ್ತು ಸಲಕರಣೆಗಳನ್ನು ಒದಗಿಸಿಕೊಟ್ಟ ಮಿತ್ರ ಶ್ರೀ ಹಟ್ಟಿ ಅವರಿಗೂ ನಾನು ಉಪಕೃತನು.

ಕಾಮರ್ಸ ಕಾಲೇಜ ಎ. ಎಂ. ಯರನಾಳ
ಬನಹಟ್ಟಿ
೨-೫-೧೯೭೬

ಪರಿವಿಡಿ

ಮುನ್ನುಡಿ iii

ಪ್ರಸ್ತಾವನೆ v

೧. ರಾಷ್ಟ್ರೀಕರಣಪೂರ್ವ ಭಾರತೀಯ ಬ್ಯಾಂಕುಗಳು ೧

೨. ಮಾರ್ಗದರ್ಶಿ ಬ್ಯಾಂಕು ಯೋಜನೆ ೨೧

೩. ಮುಖ್ಯ ವಲಯಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ೩೦

೪. ನಿರುದ್ಯೋಗಿಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ೪೩

೫. ಗೊಬ್ಬರದ ಗ್ಯಾಸು (Gobar Gas) ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ೪೬

೬. ಠೇವು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ೫೧

೭. ಉಪಸಂಹಾರ ೬೦

ಸಹಾಯಕ ಗ್ರಂಥಗಳು ಮತ್ತು ನಿಯತಕಾಲಿಕಗಳು ೭೧

೧. ರಾಷ್ಟ್ರೀಕರಣಪೂರ್ವ ಭಾರತೀಯ ಬ್ಯಾಂಕುಗಳು

ಮೊದಲು ಬ್ಯಾಂಕುಗಳ ಸಲುವಾಗಿ ಒಂದು ಪ್ರತ್ಯೇಕವಾದ ಕಾನೂನು ನಮ್ಮಲ್ಲಿ ಇದ್ದಿಲ್ಲ. ಅವು ಇತರ ಕಂಪನಿಗಳಂತೆ ಕಾರ್ಯ ಮಾಡುತ್ತಿದ್ದುದರಿಂದ ಪ್ರತ್ಯೇಕ ಕಾನೂನಿನ ಆವಶ್ಯಕತೆಯುದ್ದಿದ್ದಿಲ್ಲ. ಅಂತಲೇ ಬ್ಯಾಂಕುಗಳು 'ಕಂಪನಿಯ ಕಾಯ್ದೆ ೧೯೧೩' ರ ಪ್ರಕಾರವಾಗಿಯೇ ನೊಂದಾಯಿಸಲ್ಪಟ್ಟು ಅದರನುಗುಣವಾಗಿ ನಡೆಯುತ್ತಿದ್ದವು. ಇದರಿಂದ ಬ್ಯಾಂಕಿನ ಕಂಪನಿಗಳು ಮತ್ತು ಇತರ ಕಂಪನಿಗಳ ಸಲುವಾಗಿ ಪ್ರತ್ಯೇಕವಾದ ಕಾಯಿದೆ ಇರದಿದ್ದರ ಸಲುವಾಗಿ, ಬ್ಯಾಂಕಿನ ವ್ಯವಹಾರಗಳು ಎಷ್ಟೋ ಏರು-ಪೇರುಗಳನ್ನು ಅನುಭವಿಸಬೇಕಾಯಿತು. ಪತ್ತಿನ ಮೇಲೆ, ಸಾಲ ಹಂಚುವಿಕೆಯ ಮೇಲೆ, ಠೇವಣಿ ಇಟ್ಟುಕೊಳ್ಳುವದರ ಮೇಲೆ, ಬಂಡವಾಳ ಹೂಡುವಿಕೆಯ ಮೇಲೆ ಯಾವದೇ ತರದ ನಿರ್ಬಂಧ ಇರದ ಕಾರಣ ಬ್ಯಾಂಕಿನ ಶೀಲಕ್ಕೆ ವ್ಯತಿರಿಕ್ತವಾದ ಕಾರ್ಯಗಳು ಜರುಗಿರುವದರಿಂದ ಈ ಉದ್ದಿಮೆ ಎಷ್ಟೋ ಆರ್ಥಿಕ ಮುಗ್ಗಟ್ಟನ್ನು ಅನುಭವಿಸಿ

ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಕೆಟ್ಟ ಪ್ರಭಾವವನ್ನು ಬೀರಿದ ಎಷ್ಟೋ ಪ್ರಸಂಗಗಳನ್ನು ನಾವು ಕಾಣುತ್ತೇವೆ. ಮೊದಲನೆಯ ಜಾಗತಿಕ ಯುದ್ಧದ ಮೊದಲು ಮತ್ತು ನಂತರದ ಪರಿಣಾಮಗಳಿಂದ ಅನೇಕ ಬ್ಯಾಂಕುಗಳು ಮುಚ್ಚ ಲ್ಪಟ್ಟವು. ಇನ್ನು ಕೆಲವು ನಿರಂತರ ಹಾನಿಗೊಳಗಾದವು. ಹೀಗೆ ಒಂದಿಲ್ಲೊಂದು ತರದ ಮುಗ್ಗಟ್ಟು, ಬ್ಯಾಂಕಿನ ಉದ್ದಿಮೆಯಲ್ಲಿ ನಡೆದು ಬ್ಯಾಂಕಿನಲ್ಲಿಟ್ಟ ಜನರ ವಿಶ್ವಾಸವನ್ನು ಕಬಳಿಸುವಷ್ಟು ಮಟ್ಟಿಗೆ ಬೆಳೆದು ಕಡೆಗೆ ಬ್ಯಾಂಕುಗಳ ಮೇಲೆ ಸೂಕ್ತವಾದ ಹತೋಟಿ ಇಡುವಂಥ ನಿಯಮಗಳನ್ನು ಮತ್ತು ಕಾಯ್ದೆಯಲ್ಲಿ ಸೂಕ್ತವಾದ ಬದಲಾವಣೆ ಮಾಡ ಬೇಕೆಂಬ ಉತ್ಸುಕತೆಯಿಂದ ೧೯೩೬ ರಲ್ಲಿ ಮತ್ತೊಂದು ಕಂಪನಿಗಳ ಹೊಸ ಕಾಯ್ದೆಯನ್ನೇ ರಚಿಸಬೇಕಾಯಿತು.

೧೯೩೬ ನೆಯ ಕಂಪನಿಗಳ ಕಾಯ್ದೆ ಪ್ರಕಾರ ಬ್ಯಾಂಕಿನ ವ್ಯವಹಾರಕ್ಕೆ ಬೇಕಾದ ನಿಯಮಗಳ ಸಲುವಾಗಿ ಒಂದು ಬೇರೆ ಪರಿಚ್ಛೇದವನ್ನೇ ನಿರ್ಮಿಸಿ, ಅಲ್ಲಿ ಬ್ಯಾಂಕಿನ ವ್ಯವ ಹಾರದ ಸಲುವಾಗಿ ಬೇಕಾದ ನಿಯಮಗಳನ್ನು, ಕಟ್ಟಳೆ ಗಳನ್ನು ಸೇರಿಸಿ ಬ್ಯಾಂಕಿನ ವ್ಯವಹಾರದ ಮೇಲೆ ಸೂಕ್ತ ವಾದ ಹತೋಟಿ ತರಲು ಪ್ರಯತ್ನಪಟ್ಟರೆಂದು ಹೇಳ ಬಹುದು. ಏಕೆಂದರೆ ಇಲ್ಲಿಯವರೆಗೆ ಇಂಥ ಬೇರೆಯಾದ ಕಟ್ಟಳೆಗಳು, ವಿಧಿಗಳು ಇದ್ದಿದ್ದಿಲ್ಲ. ಈಗ ಇದು ತನ್ನದೇ ಆದ ಒಂದು ಪರಿಚ್ಛೇದವನ್ನು ಹೊಂದಿತು. ಇದರಿಂದ ಬ್ಯಾಂಕಿನ ವ್ಯವಹಾರದ ನೀತಿಯಲ್ಲಿ ಕೆಲವೊಂದು ಬದಲಾವ

ಂಡುಬಂದರೂ ಹೇಳಿಕೊಳ್ಳುವಷ್ಟು ಸುಧಾರಣೆ ಆಗಲಿಲ್ಲ. ೊದಲನೆಯ ಮಹಾಯುದ್ಧದ ಪರಿಣಾಮಗಳಂತೆ ಎರಡ ಯ ಮಹಾಯುದ್ಧದ ಪರಿಣಾಮಗಳು ಬ್ಯಾಂಕುಗಳ ಮೇಲೆ ಗಿ ಮತ್ತು ಮ್ಯಾನೇಜಿಂಗ ಏಜೆಂಟ ಎಂಬ ಹೊಸ ವರ್ಗದ ಳಿವಣಿಗೆಯಿಂದ ಬ್ಯಾಂಕಿನ ಉದ್ದಿಮೆ ನೂರೆಂಟು ಮುಗ್ಗ ನ್ನು ಅನುಭವಿಸಬೇಕಾಯಿತು. ಹೀಗಾಗಿ ಬ್ಯಾಂಕಿನ ವ್ಯವಹಾರದಲ್ಲಿ ಮುಗ್ಗಟ್ಟು ತಲೆದೋರಿ ಆರ್ಥಿಕ ಸ್ಥಿತಿಯು ಮೇಲೆ ಕೆಟ್ಟ ಪರಿಣಾಮವನ್ನೇ ಬೀರಿತು.

ಬ್ಯಾಂಕಿನ ವ್ಯವಹಾರವನ್ನು ದಕ್ಷತೆಯಿಂದ ನಡೆಯಿಸಿ ಕೊಂಡು ಹೋಗುವಂತೆ ಇತರ ಉದ್ದಿಮೆ ಪ್ರಕಾರ ಇದನ್ನು ರ್ಪಡಿಸುವ ವಿಚಾರವನ್ನು ಸ್ವತಂತ್ರ ಭಾರತ ಸರಕಾರ ಮಾಡಿತು. ಯಾಕಂದರೆ ದೇಶದ ಆರ್ಥಿಕ ಪ್ರಗತಿ ಬ್ಯಾಂಕಿನ ಉದ್ದಿಮೆಯನ್ನು ಅವಲಂಬಿಸಿರುವದರಿಂದ ಇದರ ಮೇಲೆ ಯುಕ್ತವಾದ ಹತೋಟಿ ಇಡುವದು ಸಮಂಜಸವೆನಿಸಿ ಬ್ಯಾಂಕಿಗೆ ಸಂಬಂಧಪಟ್ಟ ಬೇರೆ ಕಾಯದೆಯನ್ನೇ ತರಲು ಸರಕಾರ ವಿಚಾರಿಸಿ ೧೯೪೯ ರಲ್ಲಿ ಸುಸಜ್ಜಿತವಾದ ಬ್ಯಾಂಕಿನ ಮಸೂದೆ ಪಾಸಾಯಿತು (Banking Companies Act, 949). ಇದನ್ನು ಒಳ್ಳೆಯ, ಬಿಗಿಯಾದ ಮತ್ತು ವಿಶಾಲ ವಾದ ಬ್ಯಾಂಕುಗಳ ಕಾಯ್ದೆ ಎಂದು ವರ್ಣಿಸಲಾಯಿತು.

೧೯೪೯ ನೇಯ ಬ್ಯಾಂಕುಗಳ ವ್ಯವಹಾರಗಳ ಕಾಯ್ದೆ ಮತ್ತು ಆಗಾಗ್ಗೆ ಆದ ತಿದ್ದುಪಡಿಗಳು ಮುಖ್ಯವಾಗಿ ಠೇವಣಿ

ದಾರನ ಹಣಕ್ಕೆ ಭದ್ರತೆ ನೀಡುವಂತೆ ಸಮಾಜದ ಹಾಗೂ ದೇಶದ ಬೆಳವಣಿಗೆಯಲ್ಲಿ ಮತ್ತು ಸಮಾಜದ ಹಿತದಲ್ಲಿ ನಿರರ್ಗಳವಾಗಿ ತೊಡಗಬೇಕೆಂಬ ತಾತ್ವಿಕತೆ ಅಡಗಿದೆ. ಲಾಭದ ಆಸೆಯಿಂದ ಬ್ಯಾಂಕುಗಳು ಠೇವಣಿದಾರರ ಹಿತಾ ಸಕ್ತಿಯನ್ನು ನೋಡದೆ ಎಷ್ಟೋ ಅವ್ಯವಹಾರಿಕತೆಯಿಂದ ನಡೆದ ಉದಾಹರಣೆಗಳು ಎಷ್ಟಿಲ್ಲ. ಇವೆಲ್ಲವುಗಳನ್ನು ತಡೆ ಗಟ್ಟುವದೇ ಈ ಕಾಯ್ದೆಯ ಉದ್ದೇಶವಾಗಿತ್ತು. ರಾಷ್ಟ್ರೀ ಕರಣಕ್ಕೆ ಸರಿಸಮಾನವಾದ ಸೂತ್ರವನ್ನು ಆಗ್ಗೆ ಹಣ ಕಾಸಿನ ಮಂತ್ರಿಗಳಾಗಿದ್ದ ಶ್ರೀ ಮುರಾರಜಿ ದೇಸಾಯಿ ಯವರು ಒಂದು ತಂತ್ರವನ್ನು ನಿರೂಪಿಸಿದರು. ಅದೇ ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರೀಕರಣ (Social control on Banks) ಎಂಬ ಕಾಯ್ದೆ. ಇದನ್ನು ೧೯೬೭ ರಲ್ಲಿ ತಂದರಾದರೂ ಇದರಿಂದ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸಲಿಲ್ಲ.

ಆಗಿನ ಪರಿಸ್ಥಿತಿಯಲ್ಲಿ ನಿಧಾನವಾದ ಬೆಳವಣಿಗೆ ನಿಧಾನವಾದ ನಿಯಂತ್ರಣ ಬೇಕಾಗಿರಲಿಲ್ಲ. ಯಾಕಂದ ಸಾಮಾಜಿಕ ಸ್ಥಿತಿಗತಿಗಳು ಹದಗೆಟ್ಟು ಆರ್ಥಿಕ ಮುಗ್ಗಟ್ಟಿ ಕರಾಳ ಛಾಯೆ ಕಾಣಿಸಹತ್ತಿತ್ತು. ಕಾರಣ ಆರ್ಥಿಕ ಮುಗ್ಗ ಟ್ಟನ್ನು ಸಂಪೂರ್ಣ ಹತೋಟಿಯಲ್ಲಿ ತಂದು, ಸಮಾಜವಾದ ಸಮಾಜ ರಚನೆಯ ಕಡೆಗೆ ತ್ವರಿತ ಹೆಜ್ಜೆ ಇಡುವ ಮತ್ತು ಸಂಪತ್ತನ್ನು ವಿಕೇಂದ್ರೀಕರಿಸಿ ತ್ವರಿತ ಪ್ರಗತಿಯನ್ ಸಾಧಿಸುವ ದಿಶೆಯಲ್ಲಿ ಸಾಮಾಜಿಕ ನಿಯಂತ್ರಣ ಅಪೇ

ಸಾಲದೆ ಅದಕ್ಕಿಂತಲೂ ಯೋಗ್ಯವಾದ ರಾಷ್ಟ್ರೀಕರಣವೇ ಅನಿವಾರ್ಯವೆನಿಸಿ ೧೯೬೯ ನೆಯ ಜುಲೈ ೧೯ ರಂದು ೧೪ ದೊಡ್ಡ ಬ್ಯಾಂಕುಗಳ (ಅಂದರೆ ೫೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಠೇವಣಿ ಹೊಂದಿದ) ನ್ನು ರಾಷ್ಟ್ರೀಕರಿಸಲಾಯಿತು, ಎಂದು ರಾಷ್ಟ್ರಪತಿಗಳ ಸುಗ್ರೀವಾಜ್ಞೆಯನ್ನು ದೇಶದಾದ್ಯಂತ ರೇಡಿಯೋ ಮೂಲಕ ಪ್ರಸಾರಮಾಡಲಾಯಿತು.

ರಾಷ್ಟ್ರೀಕರಣದ ಮಸೂದೆಯನ್ನು ಖಚಿತಪಡಿಸುತ್ತ ನಮ್ಮ ನೆಚ್ಚಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ದೇಶಕ್ಕೆ ನೀಡಿದ ಪ್ರಸಾರ ಭಾಷಣದ ಕನ್ನಡ ಭಾಷಾಂತರ ಇಂತಿದೆ :

"……………ಪ್ರಜಾರಾಜ್ಯವನ್ನು ರಕ್ಷಿಸಬೇಕಾಗಿದ್ದರೆ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯು ಕೆಲವೇ ಬಲಿಷ್ಠ ಜನರ ಮುಷ್ಟಿಯೊಳಗೆ ಇರಕೂಡದು. ಯಾವದೇ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಬ್ಯಾಂಕಿಂಗ ಸಂಸ್ಥೆಗಳ ಪಾತ್ರ ದೊಡ್ಡದು. ಉಳಿತಾಯ ಮಾಡಲು ಸಮರ್ಥರಾಗಿರುವ ಜನರ ಹಣವನ್ನು ಕಾಪಾಡುವದು ಬ್ಯಾಂಕಿನ ಜವಾಬ್ದಾರಿ. ಬ್ಯಾಂಕಿನ ಆಡಳಿತ ವರ್ಗದವರು ನ್ಯಾಯವಾಗಿ ನಡೆದಲ್ಲಿ ಉಳಿತಾಯದಾರರಿಗೆ ಲಾಭ. ಕೋಟಿಗಟ್ಟಲೆ ಸಣ್ಣ ಪುಟ್ಟ ರೈತರಿಗೆ ಮತ್ತು ಕುಶಲ ಕೈಗಾರಿಕೆದಾರರಿಗೆ ಹಾಗೂ ಇತರ ಸಣ್ಣ ಪುಟ್ಟದ ಕೆಲಸ

ಗಳನ್ನು ಮಾಡುತ್ತಿರುವವರಿಗೆ ಸಾಲದ ಸೌಕರ್ಯ ಅಗತ್ಯ. ಯಾವದೇ ವ್ಯಾಪಾರ ಉದ್ಯೋಗ ಅದು ಎಷ್ಟೇ ಸಣ್ಣ ದಾಗಿರಲಿ, ದೊಡ್ಡದಾಗಿರಲಿ, ಸಾಲದ ಸೌಕರ್ಯವಿಲ್ಲದೆ ಅಭಿವೃದ್ಧಿಯಾಗುವಂತಿಲ್ಲ. ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದೆ. ಇವರಿಗೆ ಕೆಲಸ ದೊರೆಯಬೇಕು...... ಬ್ಯಾಂಕು ನಮ್ಮ ಲಕ್ಷಾಂತರ ಜನರ ಜೀವನದೊಂದಿಗೆ ನಿಕಟ ವಾದ ಸಂಪರ್ಕವನ್ನು ಹೊಂದಿದೆ. ದೇಶದ ಬ್ಯಾಂಕಿನ ವ್ಯವಸ್ಥೆಯು ನಮ್ಮೆಲ್ಲರ ಸಾಮಾಜಿಕ ಆವಶ್ಯಕತೆಗಳೊಂದಿಗೆ ಹೊಂದಿಕೊಂಡಿರಬೇಕಾಗಿರುವದು ನ್ಯಾಯ. ರಾಷ್ಟ್ರದ ಉದ್ದೇಶಗಳ ಸಾಧನೆಗೆ ಈ ವ್ಯವಸ್ಥೆ ಸಹಾಯಕವಾಗಬೇಕಾದುದು ನ್ಯಾಯವೆ. ಈ ಉದ್ದೇಶದಿಂದ ದೊಡ್ಡ ಬ್ಯಾಂಕುಗಳ ಮೇಲೆ ಬರೀ ಸಾಮಾಜಿಕ ನಿಯಂತ್ರಣವಷ್ಟೇ ಸಾಲದು. ಜನತೆಯ ಪೂರ್ಣ ಅಧಿಕಾರಕ್ಕೆ ಅವು ಒಳಪಡಬೇಕೆಂಬ ಬೇಡಿಕೆ ದೇಶದಲ್ಲಿ ಕೇಳಿ ಬರುತ್ತಿದೆ. ಇದಕ್ಕಾಗಿ ೧೦-೧೨ ವರುಷಗಳ ಹಿಂದೆ ಜೀವವಿಮೆಯ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇಂಪೀರಿಯಲ್ ಬ್ಯಾಂಕನ್ನು ಸ್ಟೇಟ ಬ್ಯಾಂಕಾಗಿ ಮಾರ್ಪಡಿಸಲಾಯಿತು. ಇಂದಿನ ಬ್ಯಾಂಕ ರಾಷ್ಟ್ರೀಕರಣ ಈ ದಿಶೆಯಲ್ಲಿ ನಾವಿಟ್ಟ ಪ್ರಮುಖ ಹೆಜ್ಜೆ." ಎಂದು ಸಮರ್ಥಿಸಿಕೊಂಡರು. ಮೊದಮೊದಲು ಅಸಮಂಜಸ, ಅವ್ಯಾವಹಾರಿಕ ಎಂದು ಎಷ್ಟೋ ಜನ ವಿರೋಧಿಸಿದರು. ಅವರೇ ಇಂದು ಅದರ ನೈಜವಾದ ಸ್ಥಿತಿಯನ್ನು ಉಪಭೋಗಿಸುತ್ತಿದ್ದಾರೆ. ಈ ದಿಶೆಯಲ್ಲಿ ರಾಷ್ಟ್ರೀಕೃತ

ಬ್ಯಾಂಕುಗಳು ಸಮಾಜವಾದದ, ಸಮಾಜ ರಚನೆಯ, ರಚನಾ ಕೃತ ಕಾರ್ಯದಲ್ಲಿ ಒಂದು ಮಹತ್ವದ ಹೆಜ್ಜೆಯನ್ನು ಇಟ್ಟು ಸಮಾಜ ವಿರೋಧ ಚಟುವಟಿಕೆಯನ್ನು ಹತ್ತಿಕ್ಕ ಯನ್ನು ನ್ನುತ್ತಿವೆ. ರಾಷ್ಟ್ರೀಕರಣದಿಂದ ಈ ಕೆಳಗಿನ ಉದ್ದೇಶ ಗಳನ್ನು ಸಾಧಿಸಲು ಸಾಧ್ಯವಾಗಿದೆ :

೧) ರಾಷ್ಟ್ರೀಕರಣವು ಕೆಲವೊಂದೇ ಜನರ ಕೈಯಲ್ಲಿಯ ಅಧಿಕಾರದ ಮತ್ತು ಸಂಪತ್ತಿನ ಕೇಂದ್ರೀಕರಣವನ್ನು ತಡೆ ಹಾಕುವದು.

ರಾಷ್ಟ್ರೀಕರಣದ ಮುಂಚೆ ಬ್ಯಾಂಕುಗಳು ಕೆಲವೊಂದೇ ಜನರ ಹಿತಾಸಕ್ತಿಯನ್ನು ಪೂರೈಸುವದರಲ್ಲಿ ಮುಂದಾ ಗಿದ್ದವು. ಬ್ಯಾಂಕಿನ ಕಾರಭಾರದಲ್ಲಿ ಕೆಲವೊಂದೇ ಹಿತಾಸಕ್ತಿ ಗಳ ಕೈವಾಡ ಒಂದಿಲ್ಲೊಂದು ತರದಿಂದ ಇರುತ್ತಿರುವದ ರಿಂದ ಬ್ಯಾಂಕುಗಳು ಅವರ ಮರ್ಜಿಯಂತೆ ನಡೆಯಬೇಕಾ ಗುತ್ತಿತ್ತು. ರಿಜರ್ವ ಬ್ಯಾಂಕಿನ ಕಟ್ಟಳೆಗಳು ಇದ್ದರೂ ಸಹ ಹಿತಾಸಕ್ತಿಗಳ ಹಿತವನ್ನೇ ನೋಡುವಂಥ ಪ್ರಸಂಗ ಒದಗಿ ಸಮಾಜದಿಂದ ಕೂಡಿಸಿದಂಥ ಠೇವು ಕೆಲವೇ ಜನರ ಉಪಯೋಗಕ್ಕೆ ಹೋಗಿ ಅದರಿಂದ ಅಧಿಕಾರ ಮತ್ತು ಬಂಡವಾಳದ ಕೇಂದ್ರೀಕರಣವು ತ್ವರಿತಗತಿಯಿಂದ ನಡೆದು ಸಮಾಜದ ಹಿತವನ್ನೇ ಕಡೆಗಾಣಿಸುವ ಸಮಯವು ಒದಗಿ ಬಂದಿತ್ತು. ಈ ಅಹಿತಕಾರಕ ಪರಿಣಾಮವನ್ನು ತೆಗೆದು ಹಾಕುವದೇ ರಾಷ್ಟ್ರೀಕರಣದ ಉದ್ದೇಶವಾಗಿತ್ತು.

೨) ಒಕ್ಕಲುತನ, ಸಣ್ಣ ಉದ್ಯೋಗಗಳು ಮತ್ತು ಇನ್ನುಳಿದ ಉದ್ದಿಮೆಗಳನ್ನು ಕಡೆಗಣಿಸಿದೆ— ದೇಶದ ಆರ್ಥಿಕ ಪ್ರಗತಿಯ ಬೆನ್ನೆಲುಬುಗಳಾದ ಒಕ್ಕಲುತನ, ಸಣ್ಣ ಕೈಗಾರಿಕೆ ಮತ್ತು ನಿರ್ಯಾತ ಇವು ಪ್ರಗತಿಯ ದ್ಯೋತಕಗಳು. ಇವುಗಳನ್ನೇ ನಮ್ಮ ವಾಣಿಜ್ಯ ಬ್ಯಾಂಕುಗಳು ಕಡೆಗಣಿಸಿದ್ದು ವೆಂದು ಹೇಳಬಹುದು. ಆದರೆ ಕೆಲವೊಂದು ಜನರು ಅನ್ಯ ರಂಗಗಳಲ್ಲಿನ ಅತಿಪ್ರಗತಿಯಿಂದ ಈ ಕ್ಷೇತ್ರದ ಪ್ರಗತಿ ಅಲ್ಪವಾಗಿ ತೋರುತ್ತದೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ಒಕ್ಕಲುತನ ದೇಶದ ಜೀವಾಳ ಸಣ್ಣ ಕೈಗಾರಿಕೆಗಳು ದೇಶದ ನಿರುದ್ಯೋಗವನ್ನು ಹೋಗಲಾಡಿಸುವ ರಾಮಬಾಣ, ದೇಶದ ನಿರ್ಯಾತ ಪ್ರಗತಿಯ ಮಂತ್ರ ಇಂಥವುಗಳನ್ನು ಕಡೆಗಣಿಸಿ ನಮ್ಮ ಪ್ರಗತಿಯನ್ನೇ ಕುಂಟಿತಗೊಳಿಸಿದ್ದಿತು ಎಂದು ಹೇಳಿ ದರೂ ತಪ್ಪಾಗಲಿಕ್ಕಿಲ್ಲ. ವಾಣಿಜ್ಯ ಬ್ಯಾಂಕುಗಳು ಲಾಭವನ್ನೇ ಒಂದು ಮೂಲ ಧ್ಯೇಯವಾಗಿಟ್ಟುಕೊಂಡ ಸಂಸ್ಥೆಗಳು. ಮೇಲಾಗಿ, ಅವುಗಳ ತತ್ತ್ವಗಳಿಗನುಸಾರವಾಗಿ— 'ದ್ರವ್ಯ ಭದ್ರ ಲಾಭ' (Real Bill Doctrine), ಮತ್ತು 'ವಾಣಿಜ್ಯ ಬ್ಯಾಂಕುಗಳ ಸಾಲದ ಸಿದ್ಧಾಂತ' (Commercial bank loan theory), ಮೇಲಿನ ವಲಯಗಳನ್ನು ಹೊರಗಿಡ ಲಾಗಿತ್ತು.

೩) ಗ್ರಾಮಾಂತರ ಪ್ರದೇಶದಲ್ಲಿ ಶಾಖೆಗಳನ್ನು ತೆರೆ ಯುವದು :

ರಾಷ್ಟ್ರೀಕರಣವಾಗುವ ಪೂರ್ವದಲ್ಲಿ ವಾಣಿಜ್ಯ ಬ್ಯಾಂಕುಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲೋ ಅಥವಾ ಔದ್ಯೋಗಿಕ ಪ್ರಧಾನ ಪ್ರದೇಶದಲ್ಲೋ ಶಾಖೆಗಳನ್ನು ತೆರೆದು, ಕೇವಲ ಲಾಭವನ್ನು ಸಾಧಿಸುವ ಧೋರಣೆಯನ್ನು ತಳೆದಿದ್ದವು. ಹೀಗಾಗಿ ಬ್ಯಾಂಕಿನ ಸವಲತ್ತು ದೇಶದ ಅತಿ ಮಹತ್ವದ ಕೇಂದ್ರಗಳಾದ ಹಳ್ಳಿಗಳಿಗೆ ದೊರೆಯದೇ ಹೋಯಿತು. ಬ್ಯಾಂಕಿನ ಸವಲತ್ತುಗಳು ಹಳ್ಳಿಹಳ್ಳಿಗೆ ಮುಟ್ಟಿದರೇನೆ ಹಳ್ಳಿಗಳ ಬೆಳವಣಿಗೆ ಸಾಧ್ಯ. ಮತ್ತು ಹಳ್ಳಿಗಳ ಬೆಳವಣಿಗೆಯೇ ನಮ್ಮ ನಾಡಿನ ಬೆಳವಣಿಗೆ ಎಂಬ ಸತ್ಯಾಂಶವನ್ನು ಸಾರ್ಥಕಗೊಳಿಸುವಲ್ಲಿ 'ಬ್ಯಾಂಕ ರಾಷ್ಟ್ರೀಕರಣ'ವು ಒಂದೇ ಹಾದಿ ಎಂದೆನಿಸಿತು. ರಾಷ್ಟ್ರೀಕರಣದಿಂದ ಹಳ್ಳಿಹಳ್ಳಿಗಳಲ್ಲಿ ಶಾಖೆಗಳನ್ನು ತೆರೆದು ಹಳ್ಳಿಗಳ ಆವಶ್ಯಕತೆಗಳಿಗನುಗುಣವಾಗಿ ಪತ್ತಿನ ಧೋರಣೆಯನ್ನು ನಿರೂಪಿಸಿ ಅವರ ಬೆಳವಣಿಗೆಯಲ್ಲಿ ಸಹಾಯಕವಾಗಬಹುದು. ರಾಷ್ಟ್ರೀಕೃತ ಬ್ಯಾಂಕುಗಳು ಸಮಾಜದ ಹಿತದತ್ತ ಲಕ್ಷ್ಯವಹಿಸುವದರಿಂದ, ಅವುಗಳಿಂದ ಸಮಾಜದ ಪ್ರಗತಿ ಸಾಧ್ಯವೆಂಬುದನ್ನು ಅರಿತು ರಾಷ್ಟ್ರೀಕರಣ ಮಾಡಬೇಕಾಯಿತು.

೪) ಇದಲ್ಲದೆ ಬ್ಯಾಂಕುಗಳಿಂದ ನಡೆಯುವ ಎಷ್ಟೋ ಅಹಿತಕಾರಕ ಕಾರ್ಯಗಳಾದ ಕಳ್ಳಸಾಗಾಣಿಕೆ, ಸಟ್ಟಾ ವ್ಯಾಪಾರ, ಉದ್ದೇಶಪೂರಿತ ಜೀವನಾವಶ್ಯಕ ಮತ್ತು ಇತರ ವಸ್ತುಗಳ ಕೊರತೆಯಿಂದ ಬೆಲೆ ಏರಿಕೆಗೆ ಪ್ರಚೋದಿಸುವಂಥ ಕಾರ್ಯಗಳು ತ್ವರಿತವಾಗುವ ಸಂಭವ ಹೆಚ್ಚಿದ್ದಿತು.

ಹೀಗಾಗಿ ಸಮಾಜದ ಹಣದಿಂದಲೇ ಸಮಾಜವನ್ನು ಶೋಷಿಸಿ ಕೆಲವೇ ಜನರು ಉಪ್ಪರಿಗೆಯ ಮೇಲೆ ಮೆರೆಯುವದನ್ನು ತಪ್ಪಿಸಲು ರಾಷ್ಟ್ರೀಕರಣವು ಆವಶ್ಯವಾಯಿತು.

೫) ಬ್ಯಾಂಕಿನ ಆಡಳಿತಕ್ಕೆ ವೃತ್ತಿ ಪ್ರಧಾನಬಲವನ್ನು ತಂದು ಕೊಡುವದು :

ಬ್ಯಾಂಕಿನ ವ್ಯವಹಾರವು ದೊಡ್ಡದಾದಂತೆ ಅದರಲ್ಲಿ ಬರುವ ಸಮಸ್ಯೆಗಳೂ ಅಷ್ಟೇ ಗಾತ್ರದಿಂದ ಬೆಳೆಯುತ್ತವೆ. ಕಾರಣ ಈ ಉದ್ಯೋಗವು ವೃತ್ತಿಪ್ರಧಾನವೆಂದು ಪರಿಗಣಿಸಲ್ಪಡದೇ ಹೋದರೆ ಇಂಥ ದೊಡ್ಡ ಸಂಸ್ಥೆಯ ಮೇಲಿನ ಹತೋಟಿ ತಪ್ಪಿ ಹಾಸ್ಯಾಸ್ಪದವಾದೀತು ಎಂದು ಹೇಳಬಹುದು. ಕಾರಣ ವೃತ್ತಿ ಪ್ರಧಾನವನ್ನಾಗಿ ಮಾಡಬೇಕಾದರೆ ಇತರ ಬೇರೆ ಬೇರೆ ಖರ್ಚುಗಳನ್ನು ಮಾಡಬೇಕಾಗುತ್ತದೆ. ಅಂದರೆ ಬ್ಯಾಂಕಿನ ಗಾತ್ರ ದೊಡ್ಡದಾದಂತೆ ಜವಾಬ್ದಾರಿಗಳು ಹೆಚ್ಚುತ್ತವೆ. ಹೆಚ್ಚಿನ ಜವಾಬ್ದಾರಿಯನ್ನು ಹೊರುವ ನುರಿತ ಮ್ಯಾನೇಜರರನ್ನು ಅವರು ಕೇಳಿದಷ್ಟು ಸಂಬಳಕೊಟ್ಟು ನಿಯಮಿಸಬೇಕಾಗುತ್ತದೆ. ಬ್ಯಾಂಕಿನ ಕಟ್ಟಡ, ಬ್ಯಾಂಕಿನ ಸಿಬ್ಬಂದಿ, ಬ್ಯಾಂಕಿನ ಇತರ ಸಲಕರಣೆಗಳೆಲ್ಲವನ್ನು ಸುಸಜ್ಜಿತವಾಗಿ ಇಟ್ಟರೇನೆ ಅದರ ಕಾರ್ಯಭಾರಗಳು ಒಳ್ಳೆಯ ರೀತಿಯಿಂದ ನಡೆಯಲು ಸಾಧ್ಯ. ಇವೆಲ್ಲವುಗಳ ಖಾಸಗಿ ಜನರಿಂದ ಸಾಧ್ಯವಾಗಲಿಕ್ಕಿಲ್ಲ. ಒಂದುವೇಳೆ ಸಾಧ್ಯವಾದರೂ ನಿಧಾನವಾಗಿ ಮಾಡುವವರಿಂದ ಅದರ ಉಪಯೋ

ಷ್ಟು, ಯಾವಾಗ ಆಗಬೇಕೆಂದೋ ಆಗದೇ ಹೋಗಬಹುದು.
ಾರಣ ಬ್ಯಾಂಕುಗಳು ರಾಷ್ಟ್ರೀಕರಿಸಲ್ಪಟ್ಟರೆ ನಿಯಮದಂತೆ
ಲ್ಲವನ್ನು ಪೂರೈಸಲು ಸಾಧ್ಯ.

೬) ಬ್ಯಾಂಕು ಸಿಬ್ಬಂದಿಗೆ ಸಾಕಷ್ಟು ತರಬೇತಿ,
ೌಲಭ್ಯ ಮತ್ತು ನ್ಯಾಯವಾದ ಸೇವಾ ಷರತ್ತುಗಳನ್ನು
ದಗಿಸಬಹುದು :

ತರಬೇತಿ, ಸೌಲಭ್ಯ ಮತ್ತು ಸೇವಾ ನಿಯಮಗಳು
ಬ್ಬಂದಿ ವರ್ಗವನ್ನು ಸಂತೋಷಪಡಿಸುವದಲ್ಲದೆ ಅವರನ್ನು
ೂರ್ಣವಾಗಿ ಕಾರ್ಯದಲ್ಲಿ ನಿರತರನ್ನಾಗಿ ಮಾಡಿ 'ತಾನೇ
ಲಸ; ಕೆಲಸವೇ ತಾನು' ಎಂಬುದರ ಮಟ್ಟಿಗೆ ಮನೋ
ಾವನೆ ಬೆಳೆದು ಅವರಲ್ಲಿದ್ದ ಸುಪ್ತಶಕ್ತಿಯು ಬ್ಯಾಂಕಿನ
ಯೋಜನೆಗೆ ಸಹಾಯವಾಗುತ್ತವೆ. ಇದರಿಂದ ಕೆಲಸದ
ಣಮಟ್ಟ ಸುಧಾರಿಸಿ ಬ್ಯಾಂಕಿನ ಕಾರ್ಯಭಾರವು ಸುರಳಿತ
ಾಗಿ ನಡೆದು ಉತ್ತಮವಾದ ಸೇವೆ ಜನಕ್ಕೆ ಮುಟ್ಟಿದಂತಾ
ವದು.

ಇಷ್ಟೇ ಅಲ್ಲ, ಬ್ಯಾಂಕಿನ ಉದ್ದಿಮೆ ಮತ್ತು
ತ್ತಿತರ ಉದ್ದಿಮೆಯಲ್ಲಿ ಮಹತ್ತರವಾದ ಅಂತರವಿದೆ.
ಯಾಂಕುಗಳಲ್ಲಿ ಶೇರುದಾರರು ಹಾಕಿರುವ ಬಂಡವಾಳ ಅತೀ
ಮೆ. ೧೪ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಾವತಿಯಾದ
ಡವಾಳ ಮತ್ತು ಮೀಸಲು ಹಣ ಸೇರಿ ಒಟ್ಟು ಠೇವಣಿ
ೊಡನೆ ತುಲನೆ ಮಾಡಿದರೆ, ಕೇವಲ ಪ್ರತಿ ಶತ ೨.೪

ಮಾತ್ರ. ೧೯೬೮ ರ ಡಿಶೆಂಬರ ಕೊನೆಗೆ ಈ ಬ್ಯಾಂಕುಗಳಲ್ಲಿ ಸುಮಾರು ೨೭೫೦ ಕೋಟಿ ರೂಪಾಯಿಗಳಷ್ಟು ಬಂಡವಾಳ ವಿತ್ತು. ಈ ಪೈಕಿ ಪಾವತಿಯಾದ ಶೇರ ಬಂಡವಾಳ ಕೇವಲ ೨೮.೫ ಕೋಟಿ ರೂಪಾಯಿಗಳು. ಅಂದರೆ ಒಟ್ಟು ಠೇವಣಿಯಲ್ಲಿ ಪಾವತಿಯಾದ ಶೇರ ಬಂಡವಾಳ ನೂರಕ್ಕೆ ಸುಮಾರು ೧ ರಷ್ಟು ಮಾತ್ರ. ಇದರಿಂದ ಒಂದು ಮುಖ್ಯವಾದ ವಿಷಯ ಕಂಡು ಬರುವದೇನಂದರೆ ಬ್ಯಾಂಕು ತನ್ನ ಒಂದು ರೂಪಾಯಿ ಬಂಡವಾಳದಿಂದ ೧೦೦ ರೂಪಾಯಿ ಇತರರ ಬಂಡವಾಳನ್ನು ಆಳುತ್ತದೆ ಎಂದಂತಾಯಿತು. ಆದರೆ ಇತರ ಉದ್ದಿಮೆಯಲ್ಲಿನ ಸ್ವಂತ ಬಂಡವಾಳದ ಮೊತ್ತ ಒಟ್ಟು ಬಂಡವಾಳದಲ್ಲಿ ಪ್ರತಿ ಶತ ಅತಿ ಹೆಚ್ಚು ಇರುವದು. ಕೆಲವು ವೇಳೆ ೧೦೦ ಕ್ಕೆ ೧೦೦ ರೂಪಾಯಿ ಎಂದೂ ಹೇಳಬಹುದು. ಈ ದೃಷ್ಟಿಯಿಂದ ಸಮಾಜದ ದುಡ್ಡು ಸಮಾಜ ಉದ್ಧಾರಕ್ಕೆ ವಿನಿಯೋಗಿಸಲ್ಪಡಬೇಕು. ವಿನಃ ಕೆಲವೇ ಜನರ ಹಿತಕ್ಕಾಗಿ ಬಳಸಲ್ಪಡಬಾರದು. ಎಂಬ ಮುಖ್ಯ ಅಂಶವನ್ನು ರಾಷ್ಟ್ರೀಕರಣದ ಸಮಯದಲ್ಲಿ ಗಮನಿಸಿದ್ದಾಗಿದೆ ಎಂದು ಹೇಳಬಹುದು.

ಸುಗ್ರೀವಾಜ್ಞೆಯ ಕಕ್ಷೆಯಲ್ಲಿ ಕೆಳಗಿನ ೧೪ ಬ್ಯಾಂಕುಗಳು ಸಮಾವೇಶವಾದವು:

೧) ಸೆಂಟ್ರಲ್ ಬ್ಯಾಂಕ ಆಫ್ ಇಂಡಿಯಾ
೨) ಬ್ಯಾಂಕ ಆಫ್ ಇಂಡಿಯಾ
೩) ಪಂಜಾಬ ನ್ಯಾಶನಲ್ ಬ್ಯಾಂಕ

೪) ಬ್ಯಾಂಕ ಆಫ್ ಬರೋಡಾ
೫) ಯುನೈಟೆಡ್ ಕಮರ್ಶಿಯಲ್ ಬ್ಯಾಂಕು
೬) ಕೆನರಾ ಬ್ಯಾಂಕು
೭) ಸಿಂಡಿಕೇಟ ಬ್ಯಾಂಕು
೮) ಅಲಹಾಬಾದ ಬ್ಯಾಂಕು
೯) ಯುನಿಯನ್ ಬ್ಯಾಂಕು
೧೦) ದೇನಾ ಬ್ಯಾಂಕು
೧೧) ಯುನೈಟೆಡ್ ಬ್ಯಾಂಕ ಆಫ್ ಇಂಡಿಯಾ
೧೨) ಇಂಡಿಯನ್ ಬ್ಯಾಂಕು
೧೩) ಬ್ಯಾಂಕ ಆಫ್ ಮಹಾರಾಷ್ಟ್ರ
೧೪) ಇಂಡಿಯನ್ ಓವರ್‌ಸೀಸ್ ಬ್ಯಾಂಕು.

ವಿದೇಶಗಳಲ್ಲಿ ಸ್ಥಾಪಿತವಾಗಿ ಈ ದೇಶದಲ್ಲಿ ಶಾಖೆಗಳನ್ನು ಹೊಂದಿರುವ ಬ್ಯಾಂಕುಗಳು ಈ ಶಾಸನದ ವ್ಯಾಪ್ತಿಗೆ ಬರದಂತೆ ಪ್ರತ್ಯೇಕಿಸಲಾಯಿತು. ರಾಷ್ಟ್ರೀಕರಣವಾದಾಗ ಬ್ಯಾಂಕಿಂಗ ವ್ಯವಸ್ಥೆಯ ಒಟ್ಟು ಪ್ರತಿ ಶತ ೭೨ ರಷ್ಟು ಠೇವಣಿಗಳನ್ನು ಈ ಬ್ಯಾಂಕುಗಳು ಹೊಂದಿದ್ದವು. ಇವು ಒಟ್ಟು ಪತ್ತಿನಲ್ಲಿ ಪ್ರತಿ ಶತ ೬೫ ರಷ್ಟು ಪತ್ತನ್ನು ಈ ೧೪ ಬ್ಯಾಂಕುಗಳಿಂದಲೇ ನೀಡಿದ್ದಾಗಿತ್ತು.

ರಾಷ್ಟ್ರೀಕರಣದ ನಂತರ ಪ್ರಗತಿ :

ರಾಷ್ಟ್ರೀಕರಣದ ನಂತರ ಬ್ಯಾಂಕಿನ ವ್ಯವಸ್ಥೆಯನ್ನು ರಾಷ್ಟ್ರೀಕೃತ ಮುನ್ನ ಹೇಗೆ ಇದ್ದಿತೋ ಹಾಗೆಯೇ ನಡೆಯಿಸಿ

ಕೊಂಡು ಹೋಗುವ ಪ್ರಯತ್ನ ಮುಂದುವರಿಯಿತು. ರಾಷ್ಟ್ರೀಕರಣ ಆದ ಕೆಲವೊಂದು ದಿನಗಳ ವರೆಗೆ ಠೇವಣಿಗಳನ್ನು ಹಿಂತೆಗೆದುಕೊಳ್ಳುವದು ಕಾಣಿಸಿಕೊಂಡಿತಾದರೂ, ಅದೇನೂ ಗಮನಾರ್ಹವಾಗಿ ಮುಂದುವರಿಯಲಿಲ್ಲ. ಈಗ ಇತರ ವಾಣಿಜ್ಯ ಬ್ಯಾಂಕುಗಳಂತೆಯೇ ರಾಷ್ಟ್ರೀಕೃತ ಬ್ಯಾಂಕುಗಳು ಮುಂದುವರಿಯುತ್ತಿರುವದನ್ನು ಕಂಡರೆ ಎಷ್ಟೋ ಜನರ ಸಂಶಯವು ನಿವಾರಣೆಯಾಗಿದೆ ಎಂದು ತಿಳಿಯಬಹುದು.

ಕೆಳಗಿನ ಪಕ್ಷಿನೋಟವು ರಾಷ್ಟ್ರೀಕೃತ ಬ್ಯಾಂಕುಗಳಿಂದ ಬೇರೆ ಬೇರೆ ಭಾಗಗಳಲ್ಲಿ ಆದ ಪ್ರಗತಿಯನ್ನು ಸ್ಪಷ್ಟಪಡಿಸುತ್ತದೆ:

ಆದ್ಯತೆ ಕೊಟ್ಟಿರುವ ವಲಯಗಳಿಗೆ ನೀಡಲಾಗಿರುವ ಪತ್ತು

(ಕೋಟಿ ರೂಪಾಯಿಗಳಲ್ಲಿ)

ಅ. ನಂ.	ವಿವರ	ಖಾತೆಗಳ ವಿವರ		ಹೆಚ್ಚಳ	ನೀಡಲಾಗಿರುವ ಪತ್ತು		ಹೆಚ್ಚಳ
		೧೯೬೯	೭೧		೧೯೬೯	೭೧	
೧	ಕೃಷಿಗಾಗಿ	೧,೭೬,೬೩೬	೮,೧೨,೪೫೫	೬,೩೬,೮೧೯	೧೬೦	೭೪೮	೧೮೮
೨	ಸಣ್ಣ ಕೈಗಾರಿಕೆ	೭೩,೯೮೭	೧,೩೯,೩೯೦	೬೫,೪೦೩	೨೫೧	೪೪೧	೧೯೦
೩	ರಸ್ತೆ ಸಾರಿಗೆ ಚಾಲಕರಿಗೆ	೨,೫೨೭	೨೧,೭೯೪	೧೯,೨೬೯	೦೦೭	೦೪೦	೦೩೩

		೧೯೬೯	೭೧		೧೯೬೯	೭೧	
೪	ಚಿಲ್ಲರೆ ವ್ಯಾಪಾರಿಗಳಿಗೆ	೨೮,೦೩೭	೧,೪೮,೩೮೦	೧,೨೦,೩೫೨	೧೯	೭೭	೫೮
೫	ಸ್ವಯಂ ಉದ್ಯೋಗ ಗಳಿಗೆ	೪೨೨	೪೦,೪೨೭	೪೦,೦೦೫	೦.೩	೮.೯	೮.೬
೬	ಸುಶಿಕ್ಷಿತ ವೃತ್ತಿದಾರರಿಗೆ	೫೯೪	೬,೮೫೬	೬,೨೬೨	೦.೫	೩.೮	೩.೩

ಮೂಲ : Southern Economist ನಂ. ೧೦, ಸಂಚಿಕೆ ೨೦, ಪುಟ ೧೯.

ಮೇಲಿನ ಅಂಕಿಸಂಖ್ಯೆಗಳಿಂದ ಗಮನಾರ್ಹವಾದ ಪ್ರಗತಿ ಆಗಿದೆ ಎಂದು ಹೇಳಬಹುದು. ಏಕೆಂದರೆ ಖಾತೆಗಳು ಮತ್ತು ಮೊತ್ತವನ್ನು ನೋಡಿದರೆ ಎಷ್ಟೋ ಪಟ್ಟು ಹೆಚ್ಚಿವೆ. ಕೃಷಿಕರ ಖಾತೆಗಳು ರಾಷ್ಟ್ರೀಕರಣದ ಮುಂಚೆ ,೭೬,೬೩೬ ಇದ್ದರೆ ೧೯೭೧ ರ ಡಿಸೆಂಬರ ೩೧ ಕ್ಕೆ ಅಂದರೆ ೯ ತಿಂಗಳಲ್ಲಿ ಆ ಸಂಖ್ಯೆಯು ೮,೧೩,೪೫೫ ಕ್ಕೆ ಏರಿತು. ಇದರಿಂದ ನಿವ್ವಳ ಹೆಚ್ಚಳ ೬,೩೬,೮೧೯ ಅಂದರೆ ಸುಮಾರು ಆರು ಪಟ್ಟಿನಷ್ಟು ಹೆಚ್ಚಳ. ಇದೇ ವಲಯದಲ್ಲಿ ಮೊತ್ತದ ರೂಪದಲ್ಲಿಯೂ ಗಮನಾರ್ಹ ಪ್ರಗತಿ ಆಗಿದೆ ಎಂದು ಹೇಳಬಹುದು. ೧೯೬೯ ಜುಲೈ ೧೯ ರ ಪೂರ್ವದಲ್ಲಿ ಒಟ್ಟು ವಿನಿಯೋಗಿಸಿದ ಪತ್ತು ಕೇವಲ ೧೬೦ ಕೋಟಿ ರೂಪಾಯಿಗಳು. ಅದೇ ಡಿಸೆಂಬರ ೩೧, ೧೯೭೧ ಕ್ಕೆ ೩೪೮ ಕೋಟಿ ರೂಪಾಯಿಗಳು. ಇದರಿಂದ ನಿವ್ವಳ ಹೆಚ್ಚಳ ೧೮೮ ಕೋಟಿ ರೂಪಾಯಿಗಳು. ಇದೇ ರೀತಿ ಸಣ್ಣ ಕೈಗಾರಿಕೆ, ರಸ್ತೆ ಸಾರಿಗೆ ಚಾಲಕರಿಗೆ, ಚಿಲ್ಲರೆ ವ್ಯಾಪಾರಿಗಳಿಗೆ, ಸ್ವಯಂ ಉದ್ಯೋಗಿಗಳಿಗೆ ಮತ್ತು ಸುಶಿಕ್ಷಿತ ವೃತ್ತಿದಾರರಿಗೆ ಕೊಡಮಾಡಿದ ಪತ್ತು ಮತ್ತು ತೆರೆದಂತಹ ಖಾತೆಗಳನ್ನು ಮೇಲಿನ ಕೋಷ್ಟಕವನ್ನು ಗಮನಿಸಿದರೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಕಂಡು ಬರುತ್ತಿದೆ. ಈ ಪ್ರಗತಿಯು ಅಷ್ಟೇ ವೇಗದ ಗತಿಯಿಂದ ಇಲ್ಲಿಯವರೆಗೆ ಮುಂದುವರಿಸಿಕೊಂಡು ಬರಲಾಗಿದೆ ಎಂದು ಹೇಳಬಹುದು. ಇದರಿಂದ ಉದ್ದೇಶಿತ

ಮಾರ್ಗದಲ್ಲಿಯೇ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳ
ಮುನ್ನಡಿಯಿಡುತ್ತಿವೆ ಎಂದು ಹೇಳಬಹುದು.

ಒಕ್ಕಲುತನ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು :

ಒಕ್ಕಲುತನವು ನಮ್ಮ ದೇಶದ ಜೀವಾಳ. ನಮ
ಒಕ್ಕಲುತನದಲ್ಲಿ ಹುದುಗಿದ ಸಂಪತ್ತು ಎಣಿಕೆಮೀರದಷ್ಟು
ಇದ್ದರೂ ನಮ್ಮ ಒಕ್ಕಲಿಗರ ಜಾಡ್ಯ ಮತ್ತು ಮೂಢನಂಬಿ
ಗಳಿಂದ ಎಷ್ಟು ಪ್ರಗತಿ ಸಾಧಿಸಬೇಕೋ ಅಷ್ಟು ಸಾಧಿಸ
ಉಳಿದುಕೊಂಡಿದೆ. ಸರಕಾರವು ಎಷ್ಟೋ ರೀತಿಯ ಸ
ಲತ್ತುಗಳನ್ನು ಕೊಟ್ಟರೂ ಗಮನಾರ್ಹವಾದ ಪ್ರಗ
ಯಾಗದೇ ಇರುವದನ್ನು ಕಂಡು ನಮ್ಮ ರಾಷ್ಟ್ರೀಯ
ಯೋಜನೆಯಲ್ಲಿ ಇದಕ್ಕೆ ಒಂದು ವಿಶೇಷವಾದ ಸ್ಥಾನವನ
ಕೊಡುತ್ತ ಬಂದಿದ್ದಾರೆ. ಹಾಗೆಯೇ ರಾಷ್ಟ್ರೀಕೃತ ಬ್ಯಾಂಕ
ಗಳ ಕಾರ್ಯಕ್ಷೇತ್ರದಲ್ಲಿಯೂ ಒಕ್ಕಲುತನಕ್ಕೆ ಅಷ್ಟೆ
ಮಹತ್ವವಾದ ಸ್ಥಾನವನ್ನು ಕೊಟ್ಟು ಪ್ರಗತಿಯನ್ನು ದ್ವಿ
ಣಿಸುವ ಹೊಣೆಯನ್ನು ಹೊರಿಸಿದ್ದಾರೆ. ಈ ಹೊಣೆಯ
ಗಡುತರ ಮತ್ತು ಕಷ್ಟಕರವಾಗಿರುವದರಿಂದ ರಾಷ್ಟ್ರೀ
ಕರಣಕ್ಕೆ ವಿರೋಧಿಸುವವರು ಸಂಶಯ ದೃಷ್ಟಿಯಿಂ
ಕಾಯ್ದು ನೋಡಹತ್ತಿದ್ದಾರೆ. ಏಕೆಂದರೆ ವಾಣಿಜ್ಯ ಬ್ಯಾಂ
ಗಳು ಒಕ್ಕಲುತನ ವಲಯವನ್ನು ತಮ್ಮ ವ್ಯಾಪ್ತಿಯಲ್ಲಿ ಒ
ಗೂಡಿಸಿಕೊಳ್ಳುವದಿಲ್ಲ. ಒಕ್ಕಲುತನದ ಸಾಲಕ್ಕಾಗಿ ಮತ್ತ
ಈ ಉದ್ದಿಮೆಗೆ ಒಗ್ಗುವ ಬೇರೆ ಹಣಕಾಸಿನ ಸಂಸ್ಥೆಗ

ರುವದರಿಂದ ವಾಣಿಜ್ಯ ಬ್ಯಾಂಕುಗಳು ಒಕ್ಕಲುತನಕ್ಕೆ ಮಾನ್ಯವಾಗಿ ಸಾಲಕೊಡಲು ಹಿಂಜರಿಯುತ್ತವೆ. ಮತ್ತು ದು ವೇಳೆ ಕೊಟ್ಟರೂ ಅತಿ ಸಣ್ಣ ಮೊತ್ತದಲ್ಲಿ ಎಂದು ಳಬಹುದು. ಆದರೆ ರಾಷ್ಟ್ರೀಕರಣದಿಂದ ಈ ಸಮಸ್ಯೆ ಯನ್ನು ಸುಲಭಗೊಳಿಸುತ್ತಿದ್ದಾರೆ. ಇದರಲ್ಲಿ ಆದ ಪ್ರಗತಿ ಯನ್ನು ಕೆಳಗಿನ ಕೋಷ್ಟಕಗಳಿಂದ ಕಂಡುಕೊಳ್ಳಬಹುದು.

ಎಲ್ಲ ವಾಣಿಜ್ಯ ಬ್ಯಾಂಕುಗಳು ಕೂಡಿ ತಮ್ಮ ಒಟ್ಟು ತ್ತಿನಲ್ಲಿ ಒಕ್ಕಲುತನಕ್ಕೆ ಒದಗಿಸಿದ ಪತ್ತಿನ ಮೊತ್ತ :

(ಜೂನ ೩೦ ಕ್ಕೆ ಪತ್ತಿನ ಮೊತ್ತದ ವಿವರ. ಕೋಟಿ ರೂಪಾಯಿಗಳಲ್ಲಿ.)

ಲಯು	೧೯೬೯	೧೯೭೦	೧೯೭೧	೧೯೭೨	೧೯೭೩ (Sept.)
ಒಟ್ಟು ಪತ್ತಿನ ಮೊತ್ತ	೩,೫೯೯	೪,೨೧೭	೪,೮೦೫	೫,೪೮೦	೬,೨೯೮
ಒಕ್ಕಲುತನ	೧೮೮	೩೪೨	೩೮೨	೪೩೯	೫೬೭
	(೫.೨)	(೮.೪)	(೭.೯)	(೮.೦)	(೦.೯%)

ೂಲ : (R. B. I. Annual Report 71-72 and 73-74).

ರಿಜರ್ವ ಬ್ಯಾಂಕಿನ ಒತ್ತಡದಿಂದ ಮತ್ತು ರಾಷ್ಟ್ರೀಕೃತ
ಬ್ಯಾಂಕುಗಳ ಬಗ್ಗೆ ಸರಕಾರದ ಘೋಷಣೆಯಲ್ಲಿಯ ಬದಲಾ
ವಣೆಯಿಂದ ಒಕ್ಕಲುತನಕ್ಕೆ ಮೀಸಲಾಗಿಟ್ಟ ಪತ್ತಿನ ಮೊತ್ತ
ದಲ್ಲಿ ಗಣನೀಯ ಹೆಚ್ಚಳವನ್ನು ಕಾಣಬಹುದು. ಅವು ಎಲ್ಲ
ಒಟ್ಟು ಬ್ಯಾಂಕುಗಳ ಅಂಕಿಸಂಖ್ಯೆಗಳಿದ್ದರೂ ಒಟ್ಟು
ಠೇವಣಿಯ ಪ್ರತಿ ಶತ ೮೫ ರಷ್ಟು ಠೇವಣಿಗಳು ರಾಷ್ಟ್ರೀಕೃತ
ಬ್ಯಾಂಕುಗಳಲ್ಲಿಯೇ ಇರುವದರಿಂದ ರಾಷ್ಟ್ರೀಕೃತ ಬ್ಯಾಂಕು
ಗಳ ಮೊತ್ತವೆ ಇದರಲ್ಲಿ ಅತೀ ಹೆಚ್ಚಿರುವದೆಂದು ಹೇಳ
ಬಹುದು. ರಾಷ್ಟ್ರೀಕರಣದ ಪೂರ್ವದಲ್ಲಿ ಒಟ್ಟು ಒಕ್ಕಲು
ತನಕ್ಕೆ ಕೊಡಮಾಡಿದ ಸಾಲ ಕೇವಲ ೧೮೮ ಕೋಟಿ
ರೂಪಾಯಿಗಳು ಅಂದರೆ ಒಟ್ಟು ಪತ್ತಿನ ಶೇಕಡಾ ೫.೨
ರಷ್ಟು ಮಾತ್ರ. ಅದೇ ಮುಂದಿನ ನಾಲ್ಕು ವರುಷದಲ್ಲಿ
ಅದು ೫೬೭ ಕೋಟಿ ರೂಪಾಯಿಗಳು. ಅಂದರೆ ಒಟ್ಟು
ಪತ್ತಿನಲ್ಲಿ ಶೇಕಡಾ ೯ ರಷ್ಟು. ಇದರಿಂದ ರಾಷ್ಟ್ರೀಕೃತ
ಬ್ಯಾಂಕುಗಳು ಒಕ್ಕಲುತನದ ಬೆಳವಣಿಗೆಯ ಸಲುವಾಗಿ
ಮಹತ್ವದ ಪಾತ್ರವನ್ನು ವಹಿಸಿವೆ ಎಂದು ಹೇಳಿದರೆ
ತಪ್ಪಾಗಲಿಕ್ಕಿಲ್ಲ. ಆದರೆ ಒಟ್ಟು ಪತ್ತಿನಲ್ಲಿ ಶೇಕಡಾ ೯ ರಷ್ಟು
ಅಷ್ಟೇನೂ ಹರುಷ ತರುವಂಥ ಮೊತ್ತವೇನಲ್ಲ. ಏಕೆಂದರೆ
ಒಕ್ಕಲುತನ ನಮ್ಮ ಆರ್ಥಿಕ ಸೂತ್ರದ ಮೂಲಾಧಾರ ಇರು
ವದರಿಂದ ಅದನ್ನು ಔದಾರ್ಯದಿಂದ ನಡೆಸಿಕೊಳ್ಳತಕ್ಕದ್ದೆಂದು
ಅಭಿಪ್ರಾಯ ಪಡುತ್ತೇನೆ. ಅಂತೂ ಒಟ್ಟು ಪತ್ತಿನಲ್ಲಿ ಸಿಂಹ
ಪಾಲು ಸಣ್ಣ ಉದ್ದಿಮೆಗಳಿಗೆ ಸಿಗಬೇಕೆಂಬುದೇ ನನ್ನ ವಾದ

೨. ಮಾರ್ಗದರ್ಶಿ ಬ್ಯಾಂಕು ಯೋಜನೆ

ವಾಣಿಜ್ಯ ಬ್ಯಾಂಕುಗಳು 'ದ್ರವ್ಯ ಭದ್ರ ಲಾಭ' ಮತ್ತು
ಾಣಿಜ್ಯ ಬ್ಯಾಂಕುಗಳ ಸಾಲದ ಸಿದ್ಧಾಂತ ಸೂತ್ರಗಳ
ನುಷ್ಠಾನದಲ್ಲಿಯೇ ನಿರತವಾಗಿರುತ್ತಲಿವೆ. ಅಂದರೆ ಈ
್ಯಾಂಕುಗಳು ಸಾಲವನ್ನು ಕೊಡುವಾಗ ಸಾಲಗಾರನು ಅಡು
ಡುವ ವಸ್ತುವನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳು
ವೆ. ವಸ್ತುವಿನ ಭದ್ರತೆ ಮತ್ತು ಸರಳ ರೀತಿಯಿಂದ
ದನ್ನು ಹಣದ ರೂಪದಲ್ಲಿ ರೂಪಾಂತರಿಸಲು ಬರುತ್ತಿರ
ೇಕು. ಅಂತಹವುಗಳನ್ನು ಮುಖ್ಯವಾಗಿ ತಮ್ಮ ಸಾಲದ
ಾಧ್ಯಮ ಎಂದು ಅವುಗಳಲ್ಲಿ ವಿಶ್ವಾಸವಿಟ್ಟು ಅವುಗಳನ್ನು
ಟ್ಟು ಮತ್ತಾವದೇ ಆಸ್ತಿಯನ್ನು ಆಧಾರವೆಂದು ಪರಿ
ಣಿಸಲು ಹಿಂಜರಿಯುತ್ತವೆ ಅಥವಾ ಅದು ವಾಣಿಜ್ಯ
್ಯಾಂಕುಗಳ ತತ್ವದ ಕಕ್ಷೆಯಲ್ಲಿ ಬರುವದಿಲ್ಲ ಎಂದು ಹೇಳಿ
ತ್ತ ಗಮನವೀಯುವುದಿಲ್ಲ. ಅಂದರೆ ವಾಣಿಜ್ಯ ಬ್ಯಾಂಕು
ಳು ಹುಂಡಿ, ಪ್ರಾಮಿಸರಿ ನೋಟ, ಬಾಂಡ ಇವುಗಳನ್ನೇ
ಡವು ಕೇಳುತ್ತವೆ. ಏಕೆಂದರೆ ಇವುಗಳನ್ನು ಶ್ರಮವಿಲ್ಲದೆ
ುತ್ತು ಬೇಕಾದಾಗ ಹಣಕ್ಕೆ ರೂಪಾಂತರಿಸಬಹುದು.
ದರಿಂದ ವಾಣಿಜ್ಯ ಬ್ಯಾಂಕು ಹೆಚ್ಚು ಮೊತ್ತದ ಲಾಭ
ಾಡುವದಲ್ಲದೆ ಠೇವನ್ನು ಬೇಕಾದಾಗ ತಿರುಗಿ ಮುಟ್ಟಿಸುವ
ಶ್ವಾಸ ಹೊಂದಿದೆ. ಪರಂತು ಇದರಲ್ಲಿ ಬರುವ ಅಡಚಣೆ
ಳೆಂದರೆ ಇಂಥ ಆಸ್ತಿಗಳನ್ನು ವ್ಯಾಪಾರಸ್ಥರು ಮಾತ್ರ

ಹೊಂದಬಹುದು. ಇದರಿಂದ ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ಉಪಯೋಗಕ್ಕೆ ಬರದಂಥ ಬ್ಯಾಂಕು ಗಳು ಎಂಬುದರ ಮಟ್ಟಿಗೆ ಬಂದಿತ್ತು. ಇದನ್ನು ಸಡಿ ಲಿಸಲು ರಿಜರ್ವ ಬ್ಯಾಂಕು 'ಲೀಡ ಬ್ಯಾಂಕು ಯೋಜನೆ' ಯನ್ನು ಹಾಕಿಕೊಂಡಿದೆ. ಇದರಿಂದ :

೧) ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಮೂರು ಖಾಸಗಿ ವಲಯ ವಾಣಿಜ್ಯ ಬ್ಯಾಂಕುಗಳು ಇದರ ಕಕ್ಷೆಯಲ್ಲಿ ಬರುತ್ತವೆ. ಮತ್ತು ಇವೆಲ್ಲವುಗಳನ್ನು 'ಲೀಡ ಬ್ಯಾಂಕುಗಳು' ಎಂದು ನಾಮಕರಣ ಮಾಡಿದ್ದಾರೆ.

೨) ಈ ಬ್ಯಾಂಕುಗಳಿಗೆ ನಮ್ಮ ದೇಶದ ಎಲ್ಲ ಜಿಲ್ಲೆ (ಮಹಾನಗರಗಳನ್ನು ಹೊರ್ತುಪಡಿಸಿ) ಗಳನ್ನು ಹಂಚಲಾ ಗಿದೆ. ಅಂದರೆ ಒಂದೊಂದು ಬ್ಯಾಂಕಿಗೆ ಕೆಲವೊಂದು ಜಿಲ್ಲೆಗಳನ್ನು ಹಂಚಿಕೊಡಲಾಗಿದೆ. ಈ ಜಿಲ್ಲೆಯ ಅಭಿ ವೃದ್ಧಿಗಾಗಿ ಇವು ಹೆಣಗಾಡಬೇಕು. ಅಲ್ಲಿ ಅವು 'ಆರ್ಥಿಕ ಬೆಳವಣಿಗೆಯ ಕ್ರಾಂತಿದೂತ' ಎಂದು ಕಾರ್ಯ ನಿರ್ವಹಿ ಸುವವು. ಭಾರತದ ಸುಮಾರು ೩೩೪ ಜಿಲ್ಲೆಗಳನ್ನು ಈ ೧೩ ವಾಣಿಜ್ಯ ಬ್ಯಾಂಕುಗಳಿಗೆ ಹಂಚಿಕೊಟ್ಟು ಈಗಾಗಲೇ ೨೨೨ ಜಿಲ್ಲೆಗಳಲ್ಲಿ ಈ ಯೋಜನೆಯ ಕಾರ್ಯ ಪ್ರಾರಂಭ ವಾಗಿದೆ. ಅಂದರೆ ಆ ಜಿಲ್ಲೆಯ ಕುಂದುಕೊರತೆಗಳನ್ನು ಕಂಡುಕೊಂಡು ಅದರ ಬೆಳವಣಿಗೆ ತೀವ್ರ ಗತಿಯಿಂದ ಆಗಲು ಬೇಕಾಗುವ ಎಲ್ಲ ಪ್ರಯತ್ನಗಳು ಈ ಬ್ಯಾಂಕುಗಳ ಮುಖಾಂತರ ಆಗಬೇಕೆಂಬುದು ಯೋಜನೆಯ ತತ್ವ.

ಏಕೆಂದರೆ ಭಾರತವು ಅತೀ ದೊಡ್ಡದಾದ ದೇಶ. ಬೇರೆ ಬೇರೆ ಭಾಷೆ, ಭೌಗೋಲಿಕ ಸಂಲಗ್ನತೆ ಇವೆಲ್ಲವುಗಳ ಮೂಲಕ ಇಡೀ ದೇಶಕ್ಕೆ ಒಗ್ಗುವಂಥ ಯೋಜನೆ ಹಾಕಿದರೆ ಅದರಿಂದ ಕೆಲವು ಜಿಲ್ಲೆಗಳಿಗೆ ಹೆಚ್ಚಿನ ಲಾಭ ತಟ್ಟಿ ಮತ್ತೆ ಕೆಲವುಗಳಿಗೆ ಅಷ್ಟೇನೂ ಲಾಭವಾಗದೇ ಜಿಲ್ಲೆಗಳ ಬೆಳವಣಿಗೆಯಲ್ಲಿ ತಾರತಮ್ಯ ಉಂಟಾಗಬಹುದೆಂದು ತಿಳಿದು ಬ್ಯಾಂಕುಗಳಿಗೆ ಪ್ರದೇಶಗಳನ್ನು ಅವುಗಳ ಸಲಹೆ ಮೇರೆಗೆ ಹಂಚಿ ಕೊಡಲಾಗಿದೆ. ಈ ಹಂಚುವಿಕೆಯಲ್ಲಿ ಆಯಾ ಪ್ರದೇಶದ ಬ್ಯಾಂಕುಗಳು ಅದೇ ಪ್ರದೇಶದ ಲೀಡ ಬ್ಯಾಂಕರನಾಗುವದರಿಂದ ಅಲ್ಲಿರುವ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅಭ್ಯಸಿಸಲು ಹೆಚ್ಚು ಸಹಾಯವಾಗಬಹುದೆಂದು ತರ್ಕಿಸಲಾಗಿದೆ.

೨) ಇದಲ್ಲದೆ ಈ ಬ್ಯಾಂಕುಗಳು ಯೋಜನೆಯ ಒಂದು ಮೂಲತತ್ತ್ವವಾದ ಪ್ರಾದೇಶಿಕ ಅಭಿವೃದ್ಧಿ (Regional Development) ಯನ್ನು ಸಾರ್ಥಕ ಪಡಿಸುವಲ್ಲಿ ಇವುಗಳ ಪಾತ್ರ ಅತಿ ಮುಖ್ಯವಾಗಿದೆ. ಈ ಬ್ಯಾಂಕುಗಳ ಮುಖಾಂತರ ವಲಯ ಅಭಿವೃದ್ಧಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ನಿಗದಿ ಪಡಿಸಿದ ಸಮಯದಲ್ಲಿ ಮಾಡಬಹುದಾಗಿದೆ. ಏಕೆಂದರೆ ಮೇಲೆ ಹೇಳಿದಂತೆ ಆಯಾ ಪ್ರದೇಶದಲ್ಲಿಯ ವಾಣಿಜ್ಯ ಬ್ಯಾಂಕುಗಳನ್ನೇ ಲೀಡ ಬ್ಯಾಂಕು ಎಂದು ನಿಯಮಿಸುವದರಿಂದ ಅವು ಹೆಚ್ಚು ಪರಿಣಾಮಕಾರಕವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಬಹುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

೪) ಲೀಡ ಬ್ಯಾಂಕುಗಳು ತಮ್ಮ ತಮ್ಮ ಪ್ರದೇಶದಲ್ಲಿ ನಾಯಕನಂತೆ ಕೆಲಸ ಮಾಡುತ್ತವೆ. ಇಷ್ಟೇ ಅಲ್ಲ ಅವು ಜನತೆ, ಸರಕಾರ ಮತ್ತು ಮತ್ತಿತರ ಸಂಸ್ಥೆಗಳನ್ನು ಸಂಯೋಜಿಸುವ ಸಂಯೋಜಕನಂತೆ (Co-ordinator) ಕೆಲಸ ನಿರ್ವಹಿಸುತ್ತವೆ. ಇದರಿಂದ "ಎಲ್ಲರ ಕೆಲಸ ಯಾರ ಕೆಲಸವೂ ಅಲ್ಲ" ಎನ್ನುವ ಗಂಡಾಂತರ ತಪ್ಪುವದು. ಆ ಜಿಲ್ಲೆಯ ಎಲ್ಲ ಅಭಿವೃದ್ಧಿ ಕೆಲಸಗಳು ಯೋಜನೆಯಂತೆ ನಡೆದು ಅದರ ಸರ್ವಾಂಗೀಣ ಉನ್ನತಿಯಲ್ಲಿ ಸಹಾಯಕಾರಿಯಾಗುತ್ತಿವೆ.

ಈಗಾಗಲೇ ಈ ಕ್ಷೇತ್ರದಲ್ಲಿ ಮಾಡಿದ ಕೆಲಸ :

ಈ ಲೀಡ ಬ್ಯಾಂಕು ಯೋಜನೆಯು ಒಳ್ಳೆಯ ಪರಿಣಾಮಕಾರಿಯಾಗಿ ಫಲಕೊಡಹತ್ತಿದೆ ಎಂಬುದನ್ನು ಕೆಳಗಿನವುಗಳಿಂದ ಮನವರಿಕೆ ಮಾಡಿಕೊಳ್ಳಬಹುದು :

೧) ಸಾಮಾಜಿಕ ಆರ್ಥಿಕ ಸಮೀಕ್ಷೆಯನ್ನು ಈಗಾಗಲೇ ಎಲ್ಲ ೩೩೪ ಜಿಲ್ಲೆಗಳಲ್ಲಿ ಕೈಕೊಳ್ಳಲಾಗಿದೆ. ಈ ಸಮೀಕ್ಷೆಯನ್ನು ತಮ್ಮ ತಮ್ಮ ಪ್ರದೇಶದಲ್ಲಿ ಆಯಾ ಬ್ಯಾಂಕುಗಳು ಕೈಕೊಂಡಿರುವದರಿಂದ ಇಂತಹ ಸಮೀಕ್ಷೆಯು ಒಂದು ಉತ್ತಮ ಸಮೀಕ್ಷೆ ಎಂದು ಹೇಳಬಹುದು. ಇದರಿಂದ ಆ ಜಿಲ್ಲೆಯ ಜಟಿಲ ಸಮಸ್ಯೆಗಳನ್ನು ಕಂಡುಕೊಂಡು ಅವುಗಳ ನಿವಾರಣೆಗೆ ಬೇಕಾಗುವ ಉಪಾಯಗಳನ್ನು ಕಂಡುಹಿಡಿಯಲು ಸಹಾಯಕವಾಗುವದು.

೨) ಕೆಲವೊಂದು ಬ್ಯಾಂಕುಗಳು ಇದೇ ಸಮೀಕ್ಷೆಯನ್ನೇ ಆಳವಾಗಿ ಮಾಡಿ ಪ್ರತಿಭಾಗಗಳಲ್ಲಿ ಬರುವಂಥ ಸಾಮಾಜಿಕ ಮತ್ತು ಆರ್ಥಿಕ ತೊಂದರೆಗಳನ್ನು ಕಂಡುಹಿಡಿದು ಅವುಗಳನ್ನು ಹೋಗಲಾಡಿಸಲು ಬೇಕಾಗುವ ಸಂಪನ್ಮೂಲಗಳನ್ನು ಹುಡುಕುತ್ತಿವೆ. ಇಷ್ಟೇ ಅಲ್ಲ ಆರ್ಥಿಕ ದೃಷ್ಟಿಯಿಂದ ಅತಿ ಯೋಗ್ಯವಾದ ಮತ್ತು ಸಮಾಜಕ್ಕೆ ಅತ್ಯಗತ್ಯವಾಗಿ ಬೇಕಾದ ಕಾಮಗಾರಿಗಳನ್ನೇ ಹಾಕಿಕೊಂಡು ಅವು ತ್ವರಿತಗತಿಯಿಂದ ಮುಗಿದು ಅದರ ಫಲ ಸಮಾಜಕ್ಕೆ ತ್ವರಿತವಾಗಿ ಸಿಗಲೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಈ ದಿಶೆಯಲ್ಲಿ ಸಾಕಷ್ಟು ಯಶಸ್ಸು ಕಂಡುಬಂದಿದೆ.

೩) ಜಿಲ್ಲಾ ಸಲಹಾ ಮಂಡಳಿ (District consultative committees) ಗಳನ್ನು ಈಗಾಗಲೇ ಸುಮಾರು ೫ ಜಿಲ್ಲೆಗಳಲ್ಲಿ ರಚಿಸಿದ್ದಾರೆ. ಈ ಸಲಹಾ ಮಂಡಳಿಯು ಆಯಾ ಜಿಲ್ಲೆಯ ಬೆಳವಣಿಗೆಗೆ ಸಹಾಯಕವಾಗುವ ಎಲ್ಲ ಕಚೇರಿಗಳನ್ನು ಪೂರಕವನ್ನಾಗಿ ಮಾಡಿ ಅವು ತ್ವರಿತಗತಿಯಿಂದ ತಮ್ಮ ತಮ್ಮ ಕೆಲಸಗಳನ್ನು ಮುಗಿಸಿ ಯೋಜನೆಯು ಒಳ್ಳೆಯ ರೀತಿಯಿಂದ ಮುಗಿಯಲು ಸಹಾಯವಾಗುವಂತೆ ಈ ಸಲಹಾ ಮಂಡಳಿ 'ಸಂಯೋಜಕ' (co-ordinator) ಎಂದು ಕಾರ್ಯ ನಿರ್ವಹಿಸುವದನ್ನು ಕಂಡರೆ ಲೀಡ ಬ್ಯಾಂಕುಗಳು ತಮ್ಮ ಜಿಲ್ಲೆಯ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿ ಜನತೆಯ ಕಲ್ಪವೃಕ್ಷವಾಗಿವೆ.

ಶಾಖೆಗಳ ಬೆಳವಣಿಗೆ :

ಈ ಲೀಡ ಬ್ಯಾಂಕ ಯೋಜನೆಯನ್ವಯ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಶಾಖೆಗಳನ್ನು ತೆರೆದು ಗ್ರಾಮಾಂತರ ಜನರಲ್ಲಿ ಬ್ಯಾಂಕಿನ ಅರಿವನ್ನು ಮಾಡಿ ಕೊಡುವ ಉತ್ಸುಕತೆಯನ್ನು ವಾಣಿಜ್ಯ ಬ್ಯಾಂಕುಗಳು ಹೊಂದಿವೆ. ೧೯೬೯ ರ ವರೆಗೆ ಗ್ರಾಮಾಂತರ ಪ್ರದೇಶ ಗಳನ್ನು ಸಂಪೂರ್ಣ ನಿರ್ಲಕ್ಷಿಸಿದ್ದರು ಎಂಬುದರಲ್ಲಿ ಸತ್ಯಾಂಶ ವಿದೆ. ಗ್ರಾಮೀಣ ಜನತೆಗೆ ಪತ್ತಿನ ಸೌಕರ್ಯವನ್ನು ಒದಗಿಸಿಕೊಟ್ಟು ಅವರ ಬೆಳವಣಿಗೆಗೆ ಸಹಾಯಕವಾಗುವ ದಲ್ಲದೆ ಅವರಲ್ಲಿ ಉಳಿತಾಯದ ಪ್ರಜ್ಞೆ ಮೂಡಿಸಿ ಅದರಿಂದ ಒದಗಿಬರುವ ಉಳಿತಾಯದ ಮೊತ್ತವನ್ನು ಆರ್ಥಿಕಾಭಿವೃದ್ಧಿ ಯಲ್ಲಿ ತೊಡಗಿಸಬಹುದು. ಯಾಕಂದರೆ ಅವರ ಉಳಿತಾಯ ಉಪಭೋಗ ಮಾಡಬೇಕೆಂಬ ಇಚ್ಛೆಯಿಂದ ಇದ್ದ ಮೊತ್ತ ದಿಂದ ಸರಿಸಿಡುವದರಿಂದ ಇದೊಂದು ಮಹತ್ವದ ಉಳಿ ತಾಯವೆಂದು ಹೇಳಬಹುದು. ಅರ್ಥಶಾಸ್ತ್ರಜ್ಞರು ಈ ಉಳಿತಾಯ ನಿಜವಾದ ಉಳಿತಾಯ, ಇದರಿಂದ ನಿಜವಾದ ಬೆಳವಣಿಗೆ ಸಾಧ್ಯವೆಂದು ಹೇಳಿದ್ದಾರೆ. ಇದನ್ನು ಸಾಧಿಸಲು ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಲ್ಲಿ ಶ್ರಮಿಸುತ್ತಿವೆ. ಇದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿದುಕೊಳ್ಳ ಬಹುದು :

ಕ್ರಮಾಂಕ	೧೯೬೯ ಜೂನ	ಆಫೀಸುಗಳ ಒಟ್ಟು ಪ್ರತಿ ಶತ ಹೆಚ್ಚಳ	ಹೆಚ್ಚಳ ೧೯೭೪ ಜೂನ	ಒಟ್ಟು ಪ್ರತಿ ಶತ ಹೆಚ್ಚಳ	೧೯೬೯ ರಿಂದ ೧೯೭೪ ಮಧ್ಯದಲ್ಲಿ ಆದ ಹೆಚ್ಚಳ ಪ್ರತಿ ಶತ
೧	೨	೩	೪	೫	೬
೧ ಗ್ರಾಮಾಂತರ ಪ್ರದೇಶದಲ್ಲಿ	೧೮೩೨	೨೨.೪%	೬೧೭೫	೩೬.೫	೫೦%
೨ ಅರೆ ಗ್ರಾಮಾಂತರ...	೩,೩೨೨	೪೦.೧%	೫,೧೯೪	೩೦.೧	೨೦.೪

೧	೨	೩	೪	೫	೬
೩ ಅರ್ಬನ ಪಟ್ಟಣಗಳಲ್ಲಿ	೧,೪೪೭	೧೭.೫	೨,೮೯೧	೧೭.೦೦	೧೬.೬
೪ ಮಹಾನಗರ ಬಂದರು ಪ್ರದೇಶಗಳಲ್ಲಿ	೧,೬೬೧	೨೦.೦	೨,೭೦೦	೧೬.೪	೧೨.೯
ಒಟ್ಟು	೮,೨೬೨	೧೦೦	೧೬,೯೩೬	೧೦೦	೧೦೦

ಮೂಲ : R. B. I. Annual report and Trend and Progress of Banking in India 73–74.

ಮೇಲಿನ ಕೋಷ್ಟಕದಿಂದ ೧೯೬೯ ಜೂನದಿಂದ ೧೯೭೪ ಜೂನದ ವರೆಗೆ ತೆರೆದ ಶಾಖೆಗಳಲ್ಲಿ ಪ್ರತಿ ಶತ ೬೦ ರಷ್ಟು ಶಾಖೆಗಳು ಗ್ರಾಮಾಂತರ ಪ್ರದೇಶದಲ್ಲಿಯೇ ತೆರೆಯಲಾಗಿದೆ. ಮತ್ತು ೧೯೬೯ ರ ವರೆಗೆ ತೆರೆದಂಥ ಶಾಖೆಗಳಲ್ಲಿ ಪ್ರತಿ ಶತ ೨.೪ ಗ್ರಾಮಾಂತರದಲ್ಲಿ. ಅದನ್ನು ಈ ಲೀಡ ಬ್ಯಾಂಕು ಳ ಯೋಜನೆಯು ಮೇರೆಗೆ ತ್ವರಿತಗೊಳಿಸಿ ೧೯೭೫ ರ ಜೂನದ ವರೆಗೆ ಪ್ರತಿ ಶತ ೩೬.೫ ಕ್ಕೆ ಏರಿಸಲಾಗಿದೆ. ಅದೇ ರೀತಿ ಅರೆ ಗ್ರಾಮೀಣ ಪ್ರದೇಶದಲ್ಲಿ ಪಟ್ಟಣ ಮತ್ತು ಮಹಾನಗರಗಳಿಗಿಂತ ಪ್ರತಿ ಶತ ಹೆಚ್ಚಳವನ್ನು ಕಾಣ ಬಹುದು. ಐದು ವರುಷದ ಅವಧಿಯಲ್ಲಿ ತೆರೆದ ಒಟ್ಟು ಶಾಖೆಗಳ ಸುಮಾರು ಪ್ರತಿ ಶತ ೭೦.೫ ಶಾಖೆಗಳು ಗ್ರಾಮಾಂತರ ಮತ್ತು ಅರೆ ಗ್ರಾಮೀಣ ಪ್ರದೇಶದಲ್ಲಿ ತೆರೆಯ ಲಾಗಿದೆ. ಇದರಿಂದ ಲೀಡ ಬ್ಯಾಂಕು ಯೋಜನೆ ಗ್ರಾಮಾಂತರ ಪ್ರದೇಶದಲ್ಲಿ ಬ್ಯಾಂಕಿನ ಸವಲತ್ತುಗಳನ್ನು ಪೂರೈಸಲು ಯಶಸ್ವಿಯಾಗಿದೆ ಎಂದು ಹೇಳಬಹುದು.

ಇದರಿಂದ ಠೇವಣಿಯಲ್ಲಿಯಾದ ಗಣನೀಯ ಹೆಚ್ಚಳ ವನ್ನು ಕಾಣುತ್ತಿದ್ದೇವೆ. ಎಲ್ಲ ವಾಣಿಜ್ಯ ಬ್ಯಾಂಕುಗಳಲ್ಲಿ ೧೯೬೯ ಜೂನಕ್ಕೆ ೪,೬೪೬ ಕೋಟಿ ರೂಪಾಯಿ ಠೇವಣಿ ಇದ್ದರೆ ಅದು ಡಿಸೆಂಬರ ೩೧, ೧೯೭೪ ಕ್ಕೆ ೧೦,೬೭೫ ಕೋಟಿ ರೂಪಾಯಿಗೆ ಏರಿದ್ದನ್ನು ಕಂಡರೆ ಯಾರಿಗೆ ಆಶ್ಚರ್ಯವಾಗ ಕ್ಕಿಲ್ಲ. ೪ ವರುಷದ ಅವಧಿಯಲ್ಲಿ ಎರಡು ಪಟ್ಟಿಗಿಂತಲೂ ಹೆಚ್ಚಿನ ಠೇವಣಿಯನ್ನು ಕಾಣುವಂತಾಯಿತು. ಕೇವಲ

ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳ ಅಂಕಿ ಸಂಖ್ಯೆಗಳನ್ನೇ ಗಣನೆಗೆ ತಗೆದುಕೊಂಡರೆ ಅದು ಜುಲೈ ೧೯೬೯ ಕ್ಕೆ ೩೮೭೨ ಕೋಟಿ ರೂಪಾಯಿ ಇದ್ದದ್ದು ೩೧ ಡಿಸೆಂಬರ ೧೯೭೪ ಕ್ಕೆ ಅದು ೮,೯೩೪ ಕೋಟಿ ರೂಪಾಯಿಗೆ ಏರಿದೆ. ಅಂದರೆ ನಿವ್ವಳ ಠೇವಣಿ ಹೆಚ್ಚಳ ೫೦೬೨ ಕೋಟಿ ರೂಪಾಯಿಗಳು. ಒಟ್ಟಿನ ಮೇಲೆ ರಾಷ್ಟ್ರೀಕರಣದಿಂದ ಠೇವಣಿಯು ಮೇಲೆ ಬಲವಾದ ಪೆಟ್ಟು ಬೀಳುತ್ತದೆ ಎಂಬ ಶಂಖೆಯು ದೂರಾಗುವದಲ್ಲದೆ ಗಣನೀಯ ಪ್ರಮಾಣದ ಹೆಚ್ಚಳ ಅದಕ್ಕೆ ಪುಷ್ಟಿಯುನ್ನು ತಂದುಕೊಟ್ಟಿದೆ. ಈ ಹೆಚ್ಚಳವು ಹೆಚ್ಚು ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶದಿಂದ ಬರುವದರಿಂದ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಅದು ಒಳ್ಳೆಯ ಪಾತ್ರವನ್ನು ವಹಿಸುವದು.

೩. ಮುಖ್ಯ ವಲಯಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು

ಸಣ್ಣ ಕೈಗಾರಿಕೆಗಳು :

ವಾಣಿಜ್ಯ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳನ್ನು ಕಡೆಗಣಿಸಿ ಕೇವಲ ದೊಡ್ಡ ದೊಡ್ಡ ಉದ್ಯೋಗಸ್ಥರ ಬೆನ್ನು ಹತ್ತುತ್ತವೆ ಎಂಬ ಕೂಗಿನ ಪರಿಣಾಮದಿಂದ ಇಂತಹ

ೃಹತ್ತಾದ ಹೊಣೆಯನ್ನು ಸರಕಾರ ಹೊರಬೇಕಾಯಿತು. ಕೆಂದರೆ ಸಣ್ಣ ಕೈಗಾರಿಕೆಗಳು ದೇಶದ ಆರ್ಥಿಕ ಪರಿಸ್ಥಿತಿ ಯನ್ನು ಸುಧಾರಿಸುವಲ್ಲಿ ಮೈಲುಗಲ್ಲುಗಳಿದ್ದಂತೆ. ಜಪಾನ ೇಶದ ಉದಾಹರಣೆಯನ್ನೇ ಆಯ್ದುಕೊಂಡರೆ ಈ ಸಣ್ಣ ುದ್ಯೋಗದಿಂದಲೇ ಜಪಾನವು ಅತಿ ಶ್ರೀಮಂತ ರಾಷ್ಟ್ರಗಳ ಟ್ಟಿಯಲ್ಲಿ ಎದ್ದು ಕಾಣಹತ್ತಿವೆ. ಆದಕಾರಣ ಅದರ ನುಕರಣೆಯು ನಮಗೆ ಬೇಕೇ ಬೇಕು. ಅದು ನಿರು ್ಯೋಗ ಸಮಸ್ಯೆಯನ್ನು ಬೃಹತ್ ಪ್ರಮಾಣದಲ್ಲಿ ಹೊಡೆ ೋಡಿಸುವದಲ್ಲದೆ ದೇಶದಲ್ಲಿ ಹಾಳಾಗಬಹುದಾದಂಥ ಂಪನ್ಮೂಲಗಳನ್ನು ಕ್ರೋಡೀಕರಿಸಿ ಅದಕ್ಕೆ ಅರ್ಥ ಬರು ಂತೆ ಮಾಡಿ ದೇಶದ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವ ರಲ್ಲಿ ಈ ಉದ್ದಿಮೆಯ ಪಾತ್ರ ಬಹಳ ಹಿರಿಯದು. "ಹನಿ ನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ರಾಶಿ" ಎಂಬಂತೆ ಣ್ಣ ಕೈಗಾರಿಕೆ ಜಿಲ್ಲಾಪಿಲ್ಲಿಯಾದ ಸಂಪನ್ಮೂಲಗಳನ್ನು ರಿಸಿ ಅವುಗಳಿಂದ ರಾಷ್ಟ್ರೀಯ ಆದಾಯ ಹೆಚ್ಚುವಂತೆ ಾಡುತ್ತವೆ. ಇಂತಹ ಮಹತ್ತರವಾದ ವಲಯವನ್ನೇ ದೈರ್ವದಿಂದ ನಮ್ಮ ವಾಣಿಜ್ಯ ಬ್ಯಾಂಕುಗಳು ಕಡೆಗಣಿ ದ್ದವು. ಇದು ಚೇತರಿಸಿಕೊಳ್ಳುವಂತೆ ಮಾಡುವದೇ ಷ್ಟ್ರೀಕರಣದ ಹಲವು ಮುಖ್ಯ ಉದ್ದೇಶಗಳಲ್ಲಿ ಒಂದು.

೩೧ ಡಿಸೆಂಬರ, ೧೯೭೨ ರ ವರೆಗೆ ಸಣ್ಣ ಕೈಗಾರಿಕೆ ಗೆ ಕೊಟ್ಟಂಥ ಸಾಲದ ಮೊತ್ತ ಸುಮಾರು ೮೭.೨೬ ಕ್ಷ ರೂಪಾಯಿಗಳನ್ನು ಸುಮಾರು ೧೬,೨೦೨ ಕೈಗಾರಿಕೆ

ದಾರರಿಗೆ ಕೊಟ್ಟಿದ್ದು ಅದು ಮುಂದಿನ ಎರಡು ವರುಷಗಳಲ್ಲಿ, ಅಂದರೆ ಡಿಸೆಂಬರ ೩೧, ೧೯೭೪ ಕ್ಕೆ ಸಾಲದ ಮೊತ್ತ ೧೦.೮೫ ಕೋಟಿ ರೂಪಾಯಿಗಳನ್ನು ಸುಮಾರು ೨,೫೬,೨೩೭ ಕೈಗಾರಿಕೆದಾರರಲ್ಲಿ ಹಂಚಿದ್ದನ್ನು ಕಂಡರೆ ವಾಣಿಜ್ಯ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುತ್ತ ಬಂದಿವೆ. ಎಂಬುದು ವಿದಿತವಾಗುತ್ತದೆ. ಪರಂತು ಒಟ್ಟು ಠೇವಣಿಯಲ್ಲಿ ಇದರ ಪ್ರತಿಶತವನ್ನು ತೆಗೆದರೆ ಬಹಳೇ ಕಡಿಮೆ ಎಂದು ಹೇಳಬಹುದು. ವಾಣಿಜ್ಯ ಬ್ಯಾಂಕುಗಳ ಒಟ್ಟು ಠೇವಣಿಯಲ್ಲಿ ಇದು ಪ್ರತಿ ಶತ ೦.೫ ಸಹ ಆಗಲಾರದು. ಇದರಿಂದ ವಾಣಿಜ್ಯ ಬ್ಯಾಂಕುಗಳು ಇನ್ನೂ ಹೆಚ್ಚು ಹೆಚ್ಚು ಲಕ್ಷ್ಯವನ್ನು ವಹಿಸಿ ಇದನ್ನು ಬೆಳೆಸುವದರಲ್ಲಿ ಸತತ ಪ್ರಯತ್ನ ಮಾಡಬೇಕು. ಮೇಲಾಗಿ ಈ ಕಾರ್ಯವು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಿಂದಲೇ ಹೆಚ್ಚು ಆಗಬಹುದು.

ಇದಲ್ಲದೆ ಈ ವಲಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಲು ರಿಜರ್ವ ಬ್ಯಾಂಕು ಸಲಹೆ ಕೊಡುತ್ತ ಬಂದಿವೆ. ಈ ಪ್ರಾಧಾನ್ಯತೆಯ ದ್ಯೋತಕವಾಗಿ ಕೆಳಗಿನ ಸುಧಾರಣೆಗಳನ್ನು ಸಣ್ಣ ಕೈಗಾರಿಕಾ ಉದ್ದಿಮೆಯ ಬೆಳವಣಿಗೆಗೆ ತರಲಾಗಿದೆ:

೧) ರಿಜರ್ವ ಬ್ಯಾಂಕು ಈ ವಲಯದ ಬೆಳವಣಿಗೆಗೆ ಒಂದು ನಿಶ್ಚಿತವಾದ ರೂಪರೇಶೆಗಳನ್ನು ಹಾಕಿಕೊಟ್ಟಿದೆ.

ಂದರೆ ಈ ವಲಯಕ್ಕೆ ಕೊಟ್ಟ ಪತ್ತನ್ನು ಗ್ಯಾರಂಟಿ ್ಕೀಮಿನಲ್ಲಿ ಹಾಕಿಕೊಂಡು ಅವಕ್ಕೆ ಕ್ರೆಡಿಟ್ ಗ್ಯಾರಂಟಿ ಾರ್ಪೋರೇಶನದಿಂದ ಗ್ಯಾರಂಟಿ ಕೊಡುವಂತೆ ಮಾಡಿದೆ. ದು ಎಪ್ರಿಲ್ ೧, ೧೯೭೩ ರಂದು ಪ್ರಾರಂಭಿಸಲ್ಪಟ್ಟಿದೆ.

೨) ಉದ್ಯೋಗದ ಗುಣ ಮತ್ತು ಅದರ ಮುಂದಿನ ಳವಣಿಗೆಯನ್ನು ಕಂಡು ಹಿಡಿದು ಬೇರೆ ಬೇರೆ ದರದ ಡ್ಡಿಯನ್ನು ಆಕರಿಸಲು ತಿಳಿಸಿದೆ. ಬಡ್ಡಿಯನ್ನು ಕರಿಸುವಾಗ ಮತ್ತು ದರವನ್ನು ನಿಗದಿಪಡಿಸುವಾಗ ್ಯಗಾರಿಕೆದಾರನ ಉತ್ಪನ್ನ ಮತ್ತು ಅವನ ತಿರುಗಿಕೊಡುವ ರ್ಹತೆಯನ್ನು ಕಂಡು ಅದನ್ನು ನಿಗದಿಪಡಿಸಬೇಕೆಂಬ ದೇಶವನ್ನೂ ರಿಜರ್ವ ಬ್ಯಾಂಕು ಎಲ್ಲ ರಾಷ್ಟ್ರೀಕೃತ ್ಯಾಂಕುಗಳಿಗೆ ನೀಡಿದೆ. ಇದರಿಂದ ಸಮಾಜದ ದುರ್ಬಲ ರ್ಗದವರೂ ಸಣ್ಣ ಕೈಗಾರಿಕೆಗಳಲ್ಲಿ ತೊಡಗಿ ತಮ್ಮ ತ್ಪನ್ನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ದಿಶೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಬೃಹತ್ ಲಸವು ಆಗಬೇಕಾಗಿದೆ. ಕಾರಣ ಸಣ್ಣ ಕೈಗಾರಿಕೆ ಮತ್ತು ಸಣ್ಣ ಉದ್ದಿಮೆಗಳ ಬೆಳವಣಿಗೆಯ ಸಲುವಾಗಿ ಕೆಲ ಂದು ಸಲಹೆಗಳನ್ನು ಇಲ್ಲಿ ಬರೆಯ ಬಯಸುವೆನು :

ಸಣ್ಣ ಕೈಗಾರಿಕೆಗಳು ನಮ್ಮ ದೇಶದ ಸಂಪತ್ತು ಷ್ಟೇ ಅಲ್ಲ ನಮ್ಮ ಸಂಸ್ಕೃತಿಯ ಕುರುಹುಗಳು. ಅವು

ಗಳನ್ನೆಲ್ಲ ಗುರುತಿಸಿ ಸುಪ್ತಾವಸ್ಥೆಯಲ್ಲಿದ್ದ ಅವುಗಳನ್ನು ಬಡಿದು ಎಬ್ಬಿಸಿ ಜಾಗೃತಿಯನ್ನುಂಟು ಮಾಡಬೇಕಾಗಿದೆ.

ಸಣ್ಣ ಉದ್ದಿಮೆಗಳನ್ನು ಕೆಳಗಿನಂತೆ ವಿಂಗಡಿಸ ಬಹುದು :

೧) ಸಣ್ಣ ಕೈಗಾರಿಕೆಗಳು ಮತ್ತು ಕುಶಲ ಕೈಗಾರಿಕೆಗಳು:

ಇದರಲ್ಲಿ ಬಡಿಗತನ, ಕಮ್ಮಾರಿಕೆ, ಕುಂಬಾರಿಕೆ, ಅಕ್ಕ ಸಾಲಿಗತನ (ಪತ್ತಾರಿಕೆ), ಮಾದಿಗತನ, ಮ್ಯಾದರ (ಮೇ ಮಾದಿಗ)ತನ, ಹೊಲಿಗೆಯ ಕೆಲಸ, ಸುಳಿಪಿನ ಕೆಲಸ, ಕೆತ್ತನೆಯ ಕೆಲಸ, ಕಸೂತಿ ಹಾಕುವದು, ಬಣ್ಣ ಹಾಕು ವದು, ಕೈಮಗ್ಗ ಮುಂತಾದವುಗಳು.

೨) ಅರೇ ಸಣ್ಣ ಉದ್ದಿಮೆಗಳು :

ಗಾಣಿಗತನ (ಎಣ್ಣೆ ತೆಗೆಯುವ) ಜಿನ್ನಿಂಗ, ಪಿಟ್ಟಿ ಗಿರಣಿ, ಒಡೆಯುವ (ಕಲ್ಲು, ನೆಲ್ಲು, ಮೆಣಸಿನಕಾಯಿ, ಜ ಇತ್ಯಾದಿ) ಗಿರಣಿಗಳು, ನಾರು ತೆಗೆಯುವ ಉದ್ದಿಮೆ, ಕಿರಾ ಅಂಗಡಿಗಳು ಇತ್ಯಾದಿಗಳು.

೩) ಸೇವಾ ಭಾವನೆಯ ಉದ್ದಿಮೆಗಳು :

ಚಹದ ಅಂಗಡಿ, ರಸ್ತೆಸಾರಿಗೆ, ನಾಪಿಕರು, ಸಣ್ಣ ದವಾಖಾನೆಗಳು, ಹಳ್ಳಿಯ ಔಷಧ ಅಂಗಡಿಗಳು ಮುಂತಾ ದವುಗಳು.

ಒಕ್ಕಲುತನದ ಉದ್ದಿಮೆ ಮತ್ತು ದನ ಸಾಕಾಣಿಕೆ:

a) ಸಣ್ಣ ಪ್ರಮಾಣದ ಒಕ್ಕಲುತನ (Marginal ...rming)

b) ದೊಡ್ಡ ಪ್ರಮಾಣದ ಒಕ್ಕಲುತನ ಅಥವಾ ...ಧಾರಿಸಿದ ಪದ್ಧತಿ ಒಕ್ಕಲುತನ

c) ಕುರಿ ಸಾಕುವದು

d) ಪಾರಿವಾಳ, ಕೋಳಿ ಸಾಕಾಣಿಕೆ

e) ಮೀನು ಹಿಡಿಯುವದು

f) ಹೈನದ ಉದ್ಯೋಗ

g) ಕಟ್ಟಿಗೆ ಕಡಿಯುವದು

ಮೇಲಿನ ಎಲ್ಲವುಗಳನ್ನು ಗುರ್ತಿಸಿ ಅವು ಅಭಿವೃದ್ಧಿ ...ಳ್ಳುವಂತೆ ಮಾಡಬೇಕು. ಉದಾಹರಣೆಗಾಗಿ ಒಬ್ಬ ... ಕುಶಲ ಕೈಗಾರಿಕೆಗಾರನಾದ ಕಮ್ಮಾರನನ್ನು ತೆಗೆದು ...ಳ್ಳುವಾ. ಕಮ್ಮಾರನಿಗೆ ಬೇಕಾದ ಬಂಡವಾಳ ಕೇವಲ ...೦ ರೂಪಾಯಿಂದ ೫೦೦. ಇಲ್ಲಿ ಅವನಿಗೆ ಬೇಕಾದುದು ...ಟ್ಟ ಬಂಡವಾಳ. ಈ ಬಂಡವಾಳದ ಅಭಾವದಿಂದ ಅವನು ...ನ್ಯ ಉದ್ಯೋಗದಲ್ಲಿ ಕೈಹಾಕುತ್ತಾನೆ. ಇದರಿಂದಾಗಿ ... ಪರಂಪರಾಗತ ಉದ್ಯೋಗವು ನಶಿಸಿ ಹೋಗುವದಲ್ಲದೆ ...ಸದಾಗಿ ಕೈಕೊಂಡ ಉದ್ಯೋಗಕ್ಕೂ ಅವನು ನ್ಯಾಯ ...ಗಿಸಲಾರ. ಅಲ್ಲದೆ ಆ ಉದ್ಯೋಗದಲ್ಲಿ ಪೈಪೋಟಿ.

ಇಂತಹ ಉದಾಹರಣೆಗಳು ಧಾರಾಳವಾಗಿ ಹಳ್ಳಿಯಲ್ಲಿ
ಸಿಕ್ಕುತ್ತವೆ. ಕಾರಣ ರಾಷ್ಟ್ರೀಕೃತ ಬ್ಯಾಂಕುಗಳು ಇಂತಹ
ಕುಶಲ ಕೈಗಾರಿಕೆದಾರರನ್ನು ಸಂಪರ್ಕಿಸಿ ಅವರು ತಮ್ಮ
ದಂಧೆಯಲ್ಲಿಯೇ ಉಳಿಯುವಂತೆ ಮಾರ್ಗದರ್ಶನ ನೀಡ
ಬೇಕು. ಇದರಿಂದ ದಂಧೆಯು ಪುನರುಜ್ಜೀವನವಾಗುವ
ದಲ್ಲದೆ ಇತರ ದಂಧೆಗಳು ಬೆಳೆಯಲು ಸಹಾಯಕವಾಗು
ವದು. ಇಂಥ ಕ್ಷೇತ್ರದಲ್ಲಿ ಆದ ಪ್ರಗತಿ ತೀರ ಕಡಿಮೆ.
ಗ್ರಾಮೀಣ ಪ್ರಗತಿ ಎಂದಾಕ್ಷಣ ಕೇವಲ ಒಕ್ಕಲುತನ ಒಂದೇ
ಎಂದು ತಿಳಿಯಬಾರದು. ಹಳ್ಳಿಯಲ್ಲಿ ಎಷ್ಟೋ ಕೈಗಾರಿಕೆ
ಗಳು ಇನ್ನೂ ಸುಪ್ತಾವಸ್ಥೆಯಲ್ಲಿದ್ದು ಅವುಗಳನ್ನು ತಿರಸ್ಕರಿ
ಸಿದ್ದರಿಂದ ಅವೆಲ್ಲವು ನಶಿಸಿ ಹೋಗಹತ್ತಿವೆ.

ಇನ್ನೊಂದು ಉದಾಹರಣೆ ಕೊಟ್ಟರೆ ಬಹುಶ
ಆಶ್ಚರ್ಯವೆನಿಸಬಹುದು. ಅರಿವೆ ಮೇಲಿನ ಕಸೂತಿಯು
ಗ್ರಾಮೀಣ ಜನಕ್ಕೆ ಕುಶಲ ಕೆಲಸ. ಇಂತಹ ಕಸೂತಿ ಅರಿವೆಗಳ
ಬೇಡಿಕೆಯು ಹಿಂದೆ ಜಾಗತಿಕ ಪೇಟೆಯಲ್ಲಿ ಬಹಳವಿತ್ತೆಂದು
ಓದಿದ್ದೇವೆ. ಇಷ್ಟೇ ಅಲ್ಲ. ಕಸೂತಿ ನಮ್ಮ ಸಂಸ್ಕೃತಿಯ
ಪರಂಪರೆಯನ್ನು ಸಾರಿ ಹೇಳುತ್ತಿದ್ದವಂತೆ. ಆದರೆ ಈಗ
ಅಂಥ ಕಸೂತಿ ನೋಡಲೂ ಸಿಗಲಾರದಾಗಿವೆ. ಅಲ್ಲೊಂದು
ಇಲ್ಲೊಂದು ಉಳಿದ ಕುಶಲ ಕೈಗಾರಿಕೆದಾರರನ್ನು ಕಂಡು
ಹಿಡಿದು ಬೆಳೆಯುವಂತೆ ಮಾಡಿದರೆ ನಮ್ಮ ಪರಂಪರೆಯ
ದೃಷ್ಟಿಯಿಂದ ಒಳ್ಳೆಯದು. ಜಗತ್ತಿನ ನಕ್ಷೆಯಲ್ಲಿ ನಮ್ಮ
ದೇಶ ಎದ್ದು ಕಾಣುತ್ತಿದ್ದರೆ ಈ ದಿಶೆಯಲ್ಲಿ ರಾಷ್ಟ್ರೀಕೃ

ಬ್ಯಾಂಕುಗಳು ಪ್ರಯತ್ನ ಪಟ್ಟು ಇಂತಹ ಕಲೆಗೆ ಬೇಕಾಗುವ ಆರ್ಥಿಕ ಸಹಾಯವನ್ನು ಒದಗಿಸುವುದರಲ್ಲಿ ಹಿಂಜರಿಯಬಾರದು.

ಇನ್ನೂ ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಕ್ಕಲುತನ ಮೂಲ ಕಸುಬು ಎಂದು ಹೇಳಿದರೂ, ಹಳ್ಳಿಯ ೨/೩ ಜನ ಇಂತಹ ಇತರ ಕಸಬುಗಳಲ್ಲಿ ಪರಿಣಿತರೂ, ನಿಷ್ಣಾವಂತರೂ ಆಗಿರುವವರಿದ್ದಾರೆ. ಆದರೆ ಅವರು ಒಂದಿಲ್ಲೊಂದು ಅಡಚಣೆಗಳಿಂದ ಮುಖ್ಯವಾಗಿ ಆರ್ಥಿಕ ತೊಂದರೆಯಿಂದ ಬಳಲಹತ್ತಿದ್ದಾರೆ. ಈ ದೃಷ್ಟಿಯಿಂದ ಅವರಿಗೆ ಅನಾರೋಗ್ಯಕರವಾದ ಪೈಪೋಟಿಯನ್ನುಂಟು ಮಾಡುವವರಿಂದ ಎರಡೂ ಉದ್ಯೋಗದ ಮೇಲೆ ದುಷ್ಪರಿಣಾಮವಾಗುವದು.

ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ದೃಷ್ಟಿಕೋನವನ್ನು ಬದಲಿಸಿ ಒಂದೇ ಒಂದು ಚೌಕಟ್ಟಿನಲ್ಲಿ ಕೆಲಸ ಮಾಡದೆ ಜನತೆಯ ಬೇಡಿಕೆಗಳಿಗನುಗುಣವಾಗಿ ಪತ್ತಿನ ನೀತಿಯನ್ನು ಮತ್ತು ಧೋರಣೆಯನ್ನು ಬದಲಾಯಿಸಬೇಕು. ಅಂದರೇನೇ ಈ ಕುಶಲ ಕೈಗಾರಿಕೆಗಳ ಬೆಳವಣಿಗೆಯಾಗಿ ಪ್ರತಿ ಕುಟುಂಬಗಳು ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಬಹುದು. ಹಾಗೇ ಎಲ್ಲ ಕುಟುಂಬಗಳೂ ಸ್ವಾವಲಂಬಿಯಾದರೆ ಇಡೀ ಹಳ್ಳಿಯೇ ಸ್ವಾವಲಂಬಿ

ಯಾದಂತೆ ಮತ್ತು ಹಳ್ಳಿಗಳಿಂದ ತುಂಬಿದ ನಮ್ಮ ದೇಶ ಸುಖರಾಜ್ಯವಾಗುವದರಲ್ಲಿ ಸಂದೇಹವಿಲ್ಲ.

ಇನ್ನು ಸಣ್ಣ ಉದ್ಯೋಗಸ್ಥರಾದಂಥ ಗಾಣಿಗರು, ಹಿಟ್ಟಿನ ಗಿರಣಿದಾರರು, ನಾರು ದಂಧೆ ಮಾಡುವವರು, ಕಿರಾಣಿ ಅಂಗಡಿಗಳು ಅಲ್ಪ ಮೊತ್ತದ ಬಂಡವಾಳದಿಂದ ತೃಪ್ತರಾಗುವಂಥವರು. ಅಂತಹವರು ಅದೇ ಬಂಡವಾಳ ಇಲ್ಲದಕ್ಕಾಗಿ ತಮ್ಮ ಉದ್ಯೋಗವನ್ನು ಬಿಟ್ಟು ಇನ್ನಿತರ ಉದ್ಯೋಗಕ್ಕೆ ಪೈಪೋಟಿ ಮಾಡಿ ಎಲ್ಲ ಉದ್ಯೋಗಗಳ ಬೆಳವಣಿಗೆಗೆ ಅಡ್ಡಿ ಮಾಡಹತ್ತಿದ್ದಾರೆ. ಇಂತಹ ಉದ್ಯೋಗಸ್ಥರಿಗೆ ವಾಣಿಜ್ಯ ಬ್ಯಾಂಕುಗಳು ದುಡಿಯುವ ಬಂಡವಾಳವನ್ನು ಒದಗಿಸಿ ಆ ಉದ್ದಿಮೆ ಬೆಳೆಯುವಂತೆ ಮಾಡಬೇಕು.

ಇನ್ನು ಕೆಲವೊಂದು ಉದ್ದಿಮೆಗಳು ಹಳ್ಳಿಯಲ್ಲಿ ಸೇವಾ ಭಾವನೆಯಿಂದ ಹುಟ್ಟಿದಂಥವು. ಸೇವೆಯು ಕೂಡ ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳಬೇಕಾಗುತ್ತದೆ. ಇಂತಹವುಗಳಲ್ಲಿ ಚಹದ ಅಂಗಡಿ, ರಸ್ತೆ ಸಾರಿಗೆ, ಅಂಬಿಗರು, ಸಣ್ಣ ದವಾಖಾನೆಗಳು ಮುಂತಾದವುಗಳನ್ನು ಸೇರಿಸಬಹುದು. ಇವು ಗ್ರಾಮೀಣ ಜನತೆಗೆ ಅತಿ ಅವಶ್ಯವಾದ ಸೇವೆಗಳು. ಇವು ಬೆಳೆಯುವಂತೆ ಗ್ರಾಮಾಂತರ ವಾಣಿಜ್ಯ ಬ್ಯಾಂಕುಗಳು ಕಂಕಣಬದ್ಧರಾಗಬೇಕು. ಇಲ್ಲಿಯೂ ಬೇಕಾದ ದುಡಿಯುವ ಬಂಡವಾಳ ತೀರ ಕಡಿಮೆ. ಆದರೂ ಅದು ಸಿಗದ್ದಕ್ಕಾಗಿ

ಷ್ಟು ಎಷ್ಟೋ ಸಮಯ ಮುಟ್ಟುವ ಪ್ರಸಂಗ ಬಂದು ಇಡೀ ಟುಂಬವೇ ಕಂಗಾಲಾಗುವದನ್ನು ನಾವು ಕಂಡಿಲ್ಲವೆ ?

ಒಕ್ಕಲುತನಕ್ಕೆ ಸಹಾಯ, ಅದರಿಂದ ಗ್ರಾಮೀಣ ನತೆಯ ಉದ್ಧಾರ ಎಂಬ ಶೀರ್ಷಿಕೆಗಳಿಂದ ರಾಷ್ಟ್ರೀಕೃತ ್ಯಾಂಕುಗಳು ಎಂತಹ ಒಕ್ಕಲಿಗರಿಗೆ ಸಹಾಯ ಸಲ್ಲಿಸ ೇಕೆಂಬುದನ್ನೇ ಮರೆತಂತೆ ಕಾಣುತ್ತದೆ. ಏಕೆಂದರೆ ತ್ತೀಚಿನ ಸಮೀಕ್ಷೆಯ ಪ್ರಕಾರ ಸಾಲ ನೀಡಿದ ಪಂಪ ಟ್ಟುಗಳ ಸಂಖ್ಯೆ ೧ ಲಕ್ಷದಿಂದ ೮ ಲಕ್ಷಕ್ಕೆ ಏರಿದೆ. ರಂತು ಇದರಿಂದ ಯಾರಿಗೆ ಸಹಾಯವಾಗಿದೆ— ಎಂದು ್ರಶ್ನಿಸಿದರೆ ಉತ್ತರವು ಬಹಳ ನಿರಾಶಾದಾಯಕವಾದುದು. ಕೆಂದರೆ ಸಮೀಕ್ಷೆಯ ಪ್ರಕಾರ ೧೦೦ ಕ್ಕೆ ೯೦ ರಷ್ಟು ್ರೀಮಂತರೇ ಇದರಿಂದ ಲಾಭ ಹೊಂದಿದವರು. ಕಾರಣ ೋಟಿಗಟ್ಟಲೆ ಹಣ ಒಕ್ಕಲುತನದ ಉದ್ದಿಮೆಯಲ್ಲಿ ವಿನಿ ಯೋಗಿಸಿದರೂ ಅದು ಶ್ರೀಮಂತರ ಶ್ರೀಮಂತಿಕೆಯನ್ನೇ ಚ್ಚಿಸಿದೆ ವಿನಃ ಬಡವರಿಗೆ ಹಿತವಾಗಿಲ್ಲ. ಇದರಲ್ಲಿ ಯಾರೂ ಪ್ಪುಗಾರರಲ್ಲ. ಪ್ರಯೋಗ ಮಾಡುವ ಹಂತದಲ್ಲಿ ಇಂತಹ ೋಷಗಳು ಆಗಬಹುದು. ಇಲ್ಲಿ ಬ್ಯಾಂಕರನ ಕೆಲಸ ತಿ ಮಹತ್ವದ್ದು. ಸಣ್ಣ ಹಿಡುವಳಿದಾರನ ಮನೆ ಮನೆಗೆ ೋಗಿ ಅವನಿಗೆ ಎಲ್ಲ ಸವಲತ್ತುಗಳನ್ನು ನೀಡಿ ಪತ್ತಿನ ಪಯೋಗ ಅವನಿಗೆ ಆಗುವಂತೆ ಮಾಡಿ ಅದರಂತೆ ಅವನ ಸ್ಥಿತಿ ಸುಧಾರಿಸಿದರೆ ಮಾತ್ರ ಗ್ರಾಮೀಣ ಭಾಗದಲ್ಲಿ ಂತಹ ಬ್ಯಾಂಕುಗಳನ್ನು ತೆರೆವದು ಸಾರ್ಥಕವಾಗುವದು.

ಶ್ರೀಮಂತರು ತೋರಿಸುವ ಆಮಿಷಕ್ಕೆ ಒಳಗಾಗಿ ಅವರಿಗೆ ಅನುಕೂಲವಾಗುವಂತೆ ಕಾಗದ ಪತ್ರಗಳನ್ನು ತಯಾರಿಸಿ ಸಣ್ಣ ಹಿಡುವಳಿದಾರರಿಗೆ ಸಲ್ಲಬೇಕಾದ ಪತ್ತನ್ನು ಶ್ರೀಮಂತ ಒಕ್ಕಲಿಗನಿಗೆ ನೀಡಿದರೆ ಸಣ್ಣ ಹಿಡುವಳಿದಾರನ ಇಡೀ ಕುಟುಂಬದ ಕತ್ತು ಹಿಚುಕಿದಂತೆಯೇ ಸರಿ. ಇದರಲ್ಲಿ ಬ್ಯಾಂಕರನು ತಾನು ಬ್ಯಾಂಕರನಂತೆ ಕಾರ್ಯನಿರ್ವಹಿಸದೆ ಒಬ್ಬ ಮಾನವನಾಗಿ, ಬಡವರ ಹಿತಚಿಂತಕನಾಗಿ ಕಾರ್ಯ ಮಾಡಬೇಕು. ಅಂದರೇನೇ ಗ್ರಾಮೀಣ ಬಡ ಒಕ್ಕಲಿಗರು ಮುಂದೆ ಬರಲು ಸಾಧ್ಯ ಮತ್ತು ಬಡತನ ದೂರವಾಗಲು ಸಾಧ್ಯ. ದಿಲ್ಲಿಯಲ್ಲಿ ಮಾಡಿದ ಪ್ರಧಾನಿಯವರ ಅರ್ಥಗರ್ಭಿತ ಘಂಟಾಘೋಷ ಹಳ್ಳಿಯ ಜನರ ಕಿವಿಗೆ ಈ ಬ್ಯಾಂಕು ಗಳಿಂದ ತಲುಪಬೇಕಾಗಿದೆ. ಈ ದಿಶೆಯಲ್ಲಿ ಸರಕಾರವೂ ಸೂಕ್ತವಾದ ಧೋರಣೆಗಳನ್ನು ನಿರೂಪಿಸಿ ಆ ಬೃಹತ್ ಕಾರ್ಯ ತೀವ್ರ ರೀತಿಯಿಂದ ಆಗುವಂತೆ ಮಾಡಬೇಕು. ಆದಕಾರಣ ಈ ದಿಶೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಈ ಗ್ರಾಮೀಣ ಭಾರತದಲ್ಲಿ ಮಾಡಬೇಕಾದ ಕಾರ್ಯ ಇಷ್ಟೇ ಎಂದು ನಿಗದಿ ಮಾಡುವದು ಅಸಾಧ್ಯ.

ನಿರ್ಯಾತ :

ನಿರ್ಯಾತವು ನಮ್ಮ ದೇಶದ ಬೆಳವಣಿಗೆಗೆ ಅವಶ್ಯಕ. ನಮ್ಮಷ್ಟಕ್ಕೆ ನಾವೇ ಬೆಳೆಯುತ್ತೇವೆ ಎಂಬ ಹವ್ಯಾಸಕ್ಕೆ ಬೀಳದೆ, ತ್ವರಿತ ಗತಿಯಿಂದ ಬೆಳೆಯಬೇಕಾದರೆ ಮಾಡ ಬೇಕಾದ ಎಲ್ಲ ಕಾರ್ಯಗಳನ್ನು ಮಾಡಲೇಬೇಕು. ತ್ವರಿತ

ಯ ಪ್ರಗತಿಯು ಔದ್ಯೋಗೀಕರಣದಿಂದಲೇ ಸಾಧ್ಯ
ದು ಎಷ್ಟೋ ಅರ್ಥಶಾಸ್ತ್ರಜ್ಞರು ಸ್ಪಷ್ಟವಾದ ಅಭಿಪ್ರಾಯ
ನ್ನು ತಾಳಿದ್ದಾರೆ. ಅದನ್ನು ನಾವು ನೆಚ್ಚಲೇಬೇಕು. ಈ
ಯಲ್ಲಿ ಉದ್ದಿಮೆಕರಣದ ಸಲುವಾಗಿ ಬೇರೆ ಬೇರೆ
ಕಾರದ ಮಶಿನ್ ತಾಂತ್ರಿಕತೆ, ಬಂಡವಾಳ ಇತ್ಯಾದಿಗಳು
ಮ್ಮ ಹತ್ತಿರ ಸಾಕಷ್ಟು ಇಲ್ಲದೆ ಇದ್ದರೆ ಮತ್ತೊಂದು
ಶಗಳಿಂದಾದರೂ ತಂದು ಪ್ರಗತಿಯನ್ನು ದ್ವಿಗುಣಗೊಳಿ
ೕಬೇಕು. ಈ ದೃಷ್ಟಿಯಿಂದ ನಾವು ಮಾಡಿಕೊಂಡ
ಮಾತಕ್ಕೆ ಪ್ರತಿಯಾಗಿ ನಿರ್ಯಾತ ಮಾಡಲಿಕ್ಕೇಬೇಕು.
ಕಾರಣ ನಮ್ಮ ಸರಕಾರವು ನಿರ್ಯಾತವನ್ನು ಮುಖ್ಯ
ಯುಗಳಲ್ಲಿ ಸೇರಿಸಿದೆ. ಈ ವರುಷ ೧೯೭೬-೧೯೭೭
ರ್ಯಾತದ ಗುರಿಯನ್ನು ೫,೦೦೦ ಕೋಟಿ ರೂಪಾಯಿ
ಂದು ನಿಗದಿ ಮಾಡಿದ ಮೊತ್ತವನ್ನು ತಲುಪುವದರಲ್ಲಿ
ೂಸ ಹೊಸ ನಮೂನೆಯ ಭೋಕ್ತ ವಸ್ತುಗಳನ್ನು ಮತ್ತು
ನ್ನಿತರ ಗ್ರಾಮೀಣ ವಸ್ತುಗಳನ್ನು ಇದರ ವ್ಯಾಪ್ತಿಯಲ್ಲಿ
ವಡಿಸಿಕೊಳ್ಳಲಾಗಿದೆ. ಕಾರಣ ಈ ಗುರಿ ಮುಟ್ಟುವ
ಮ್ಮ ಸರಕಾರದ ಪ್ರಯತ್ನಗಳೆಲ್ಲವೂ ಸಫಲವಾಗುವಂತೆ
ಡಲು ರಾಷ್ಟ್ರೀಕೃತ ಬ್ಯಾಂಕುಗಳು ಹೆಣಗಬೇಕಾಗಿದೆ.

ಈ ದಿಶೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ನಿರ್ಯಾ
ವ್ಯಾಪ್ತಿಗೆ ಒಳಪಟ್ಟ ಎಲ್ಲ ವಸ್ತುಗಳನ್ನು ತನ್ನ
ತ್ರದಲ್ಲಿ ಅಳವಡಿಸಿಕೊಂಡು ಅವುಗಳನ್ನು ಉತ್ಪಾದಿಸುವ
ತ್ಪಾದಕರನ್ನು ಕಂಡು ಸರಕಾರದ ನೀತಿಯನ್ನು ಅವರಿಗೆ

ಚೆನ್ನಾಗಿ ಮನವರಿಕೆ ಮಾಡಿಕೊಡಬೇಕು. ಇದಲ್ಲದೆ ಸರಕಾರದ ಧೋರಣೆಗಳು ಚೆನ್ನಾಗಿ ಕಾರ್ಯಗತವಾಗುವಂತೆ ಶಕ್ತಿಮೀರಿ ಪ್ರಯತ್ನಿಸಬೇಕು. ಏಕೆಂದರೆ ಸರಕಾರದ ಧೋರಣೆಯನ್ನು ದಟ್ಟವಾಗಿ ಮನವರಿಕೆ ಮಾಡಿಕೊಡುವ ದರಲ್ಲಿ ಬ್ಯಾಂಕರನು ಎಷ್ಟು ಸಹಾಯವಾಗುವನೋ ಅಷ್ಟು ಸಹಾಯ ಇನ್ನಾರಿಂದಲೂ ಆಗದು. ಏಕೆಂದರೆ ಈತನು ಜನರ ಮಧ್ಯದಲ್ಲಿ ಇದ್ದು ಅವರ ಇಂಗಿತವನ್ನು ಪೂರ್ಣವಾಗಿ ಅರಿತವನಾಗಿದ್ದಾನೆ. ಇದರಲ್ಲಿ ಬ್ಯಾಂಕರನು ಕೆಳಗಿನವು ಗಳನ್ನು ಗಮನಿಸಬೇಕು :

೧ ಬ್ಯಾಂಕರನು ನಿರ್ಯಾತದ ಸರಕುಗಳ ಮೇಲೆ ೧೦೦ ಕ್ಕೆ ೧೦೦ ರಷ್ಟು ಗ್ಯಾರಂಟಿಯನ್ನು ಕೇಳದೆ ಸಾಧ್ಯವಿದ್ದ ಎಲ್ಲ ನಿಯಮಗಳನ್ನು ಸಡಿಲಗೊಳಿಸ ಬೇಕು.

೨ ಗುಣಮಟ್ಟ ಸುಧಾರಿಸುವದರಲ್ಲಿ ಸಹಾಯವಾಗಬೇಕು.

೩ ಉತ್ಪಾದನಾ ಖರ್ಚು ಕಡಿಮೆ ಮಾಡುವದರಲ್ಲಿ ಸಾಧ್ಯ ವಿದ್ದ ಎಲ್ಲ ಸಲಹೆಗಳನ್ನೀಯಬೇಕು.

೪ ನಿರ್ಯಾತದಲ್ಲಿ ಜನತೆಗೆ ವಿಶ್ವಾಸ ಹುಟ್ಟಿ ಸರಕಾರದ ಗುರಿಯನ್ನು ಮುಟ್ಟುವದರಲ್ಲಿ ಜನತೆ ಮುಂದೆ ಬರು ವಂತೆ ಮಾಡಬೇಕು.

೫ ಹೆಚ್ಚು ಹೆಚ್ಚು ಸರಕುಗಳು ನಿರ್ಯಾತದ ಪಟ್ಟಿಯಲ್ಲಿ ಸೇರ್ಪಡೆಯಾಗುವಂತೆ ಪ್ರಯತ್ನಿಸಬೇಕು. ಈ ದಿ

ಯಲ್ಲಿ ಬೇಕಾದ ಸಮೀಕ್ಷೆಯನ್ನು ಕೈಕೊಳ್ಳುವದರಲ್ಲಿ ಸಹಾಯವಾಗಬೇಕು.

ನಿರ್ಯಾತಕ್ಕೆ ಬೇಕಾದ ತಾಂತ್ರಿಕತೆ ಮತ್ತು ನಿರ್ಯಾತದಲ್ಲಿಯ ಬಿಕ್ಕಟ್ಟನ್ನು ಬಿಡಿಸಲು ಪ್ರಯತ್ನಮಾಡಿ ನಿರ್ಯಾತಕರು ಮತ್ತು ಸರಕಾರದಲ್ಲಿ ಒಂದು ಉತ್ತಮವಾದ ಸಂಬಂಧ ಬೆಳೆಸುವದರಲ್ಲಿ ಪ್ರಯತ್ನಿಸಬೇಕು.

ತ್ವರಿತಗತಿಯಿಂದ ಬೆಳೆಯುತ್ತಿರುವ ನಮ್ಮ ದೇಶದ ...ಯಾತ ಹೆಚ್ಚಾಗಲಿಕ್ಕೇಬೇಕು. ಮತ್ತು ಆಯಾತಕ್ಕೆ ...ರಿಯಾಗಿ ನಿರ್ಯಾತವನ್ನು ಬೆಳೆಸಲೇಬೇಕು. ಅದ...ಂತಲೆ ಸೂಕ್ತವಾದ ಕಾರ್ಯ ಈ ಕ್ಷೇತ್ರದಲ್ಲಿ ಆಗ...ೇಕೆಂದೆ ನಮ್ಮ ಸರಕಾರ ನಿರ್ಯಾತವನ್ನು ಮುಖ್ಯ...ಲಯಗಳಲ್ಲಿ ಸೇರಿಸಿದೆ. ಅದನ್ನು ಬ್ಯಾಂಕರನು ಚೆನ್ನಾಗಿ ...ರಿತುಕೊಳ್ಳಬೇಕು.

೪. ನಿರುದ್ಯೋಗಿಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು

ವಿದ್ಯಾವಂತ ಜನತೆ ದೇಶದ ಪ್ರಗತಿಯ ಕುರುಹು. ...ರುದ್ಯೋಗತನ ದೇಶದ ಪ್ರಗತಿಯನ್ನು ಕುಂಠಿತ...ಳಿಸುವದಲ್ಲದೆ ಅದೊಂದು ಜಾಡ್ಯ ರೋಗವಿದ್ದಂತೆ.

ಅದು ಆರ್ಥಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮವನ್ ಬೀರುತ್ತದೆ. ಅದರಲ್ಲಂತೂ ವಿದ್ಯಾವಂತ ನಿರುದ್ಯೋ ಗಳಿದ್ದರೆ ಮತ್ತಿಷ್ಟು ಭಯಂಕರ ರೋಗವೆಂದೇ ಪ ಗಣಿಸಲ್ಪಡಬೇಕು. ಕೆಲಸ ಮಾಡಲು ಸಮರ್ಥರಿ ಎಲ್ಲರೂ ದೇಶದ ಸೊತ್ತು ಅಥವಾ ಸಂಪತ್ತು. ಸರಕಾ ಸೂಕ್ತವಾದ ಧೋರಣೆಯಿಂದ ಈ ಸಂಪತ್ತನ್ನು ರಾಷ ಹಿತದ ಸಲುವಾಗಿ ಉಪಯೋಗಿಸಬೇಕು. ಜಗತ್ತಿ ಯಾವದೇ ರಾಷ್ಟ್ರವು ಈ ಸಂಪತ್ತನ್ನು ಸಂಪೂರ್ಣ ಉ ಯೋಗಿಸುವದರಲ್ಲಿ ವಿಫಲವಾಗಿದೆ. ಪ್ರತಿ ರಾಷ್ಟ್ರದ ನಿರುದ್ಯೋಗತನದ ಸಮಸ್ಯೆ ಇದ್ದೇ ಇದೆ ಮತ್ತು ಅ ದಿನ ದಿನಕ್ಕೆ ಬೆಳೆಯತೊಡಗಿದೆ.

ಈ ನಿರುದ್ಯೋಗ ಸಮಸ್ಯೆ ಬಗೆಹರಿಸುವದರ ರಾಷ್ಟ್ರೀಕೃತ ಬ್ಯಾಂಕುಗಳ ಪಾತ್ರ ಬೃಹತ್ತಾಗಿದೆ. ಜಾಣತ ತಾಂತ್ರಿಕತೆ ಮತ್ತು ಕುಶಲತೆ ಬೆಳೆದು ಅವು ಜನತೆ ಹಿತವಾಗಬೇಕಾದರೆ ಅವುಗಳ ಚಲನವಲನವಾಗಬೇಕು. ಚಲನವಲನ ಬಂಡವಾಳದಿಂದಲೇ ಸಾಧ್ಯ. ಕಾರ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಭಾಗದಲ್ಲಿರು ನಿರುದ್ಯೋಗಿಗಳ ಮತ್ತು ಬೆಳೆಯಬಹುದಾದಂಥ ಉದ್ದಿ ಗಳ ಸಮೀಕ್ಷೆ ಮಾಡಿ ನಿರುದ್ಯೋಗಿಗಳನ್ನು ಉದ್ಯೋಗ ರನ್ನಾಗಿ ಮಾಡಲು ಹೆಣಗಬೇಕು. ಪ್ರತಿ ಶಾಖೆ ಹೆಣಗಾಡಿ ಈ ಸಮಸ್ಯೆಯ ಗಾತ್ರವನ್ನು ಕಡಿಮೆ ಮಾಡಬಹುದ ಈ ದಿಶೆಯಲ್ಲಿ ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳು ದಿ

ಷ್ಟೆಯನ್ನು ಇಟ್ಟಿವೆ ಎಂದು ಹೇಳಬಹುದು. ೧೯೬೯ ರಲ್ಲಿ ಸಾರಿಗೆ ಚಾಲಕರಿಗೆ ಕೊಟ್ಟ ಸಾಲ ೭ ಕೋಟಿ ರೂಪಾಯಿ. ಮತ್ತು ಖಾತೆಗಳು ೨,೫೨೭ ಇದ್ದರೆ ಅದು ೧೯೭೧ ಸಾಲದ ಮೊತ್ತ ೪೦ ಕೋಟಿ ರೂಪಾಯಿಗಳಿಗೂ ಮತ್ತು ತೆಗಳ ಸಂಖ್ಯೆ ೨೧,೭೯೪ಕ್ಕೂ ಏರಿದೆ ಎಂದು ಹೇಳಹುದು. ಅದೇ ರೀತಿಯಾಗಿ ಸ್ವಯಂ ಉದ್ಯೋಗಿಗಳಿಗೆ ಲಿನ ಅವಧಿಯಲ್ಲಿ ೦.೩ ಕೋಟಿ ರೂಪಾಯಿಗಳ ಸಾಲ ಟ್ಟು ಅವರ ಸಂಖ್ಯೆ ೪೨೨ ಇದ್ದರೆ ಅದು ೮.೯ ಕೋಟಿ ಪಾಯಿಗಳಿಗೂ ಮತ್ತು ಸಂಖ್ಯೆ ೪೦,೪೨೭ ಕ್ಕೆ ಏರಿದೆ ದು ಹೇಳಬಹುದು. ಅದೇ ರೀತಿ ಸುರಕ್ಷಿತ ವೃತ್ತಿ ವರಿಗೆ ಅದೇ ಅವಧಿಯಲ್ಲಿ ೦.೫ ಕೋಟಿ ರೂಪಾಯಿ ಕೊಟ್ಟು ಅವರ ಸಂಖ್ಯೆ ೫೯೪ ಇದ್ದರೆ ಅದು ೩.೮ ಟಿ ರೂಪಾಯಿಗಳಿಗೆ ಮತ್ತು ಅವರ ಸಂಖ್ಯೆ ೬,೮೫೬ ಕ್ಕೆ ದೆ ಎಂದು ಹೇಳಬಹುದು. ಈ ಮೇಲಿನ ಅಂಕಿ-ಸಂಖ್ಯೆ ಂದ ಆಶಾದಾಯಕವೆನಿಸಿದರೂ, ಸಾಧಿಸಬೇಕಾದದ್ದು ಕಷ್ಟಿದೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ನಮ್ಮ ಶದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ೩೬,೦೦,೦೦೦ ತ್ತು ಒಟ್ಟು ನಿರುದ್ಯೋಗಿಗಳ ಸಂಖ್ಯೆ ಸುಮಾರು ಒಂದು ಟಿಗಿಂತಲೂ ಹೆಚ್ಚು ಎಂದಾಕ್ಷಣ ಮೇಲಿನ ಅಂಕಿ-ಸಂಖ್ಯೆ ಏನೂ ಅಲ್ಲ ಎಂಬುದು ಸಿದ್ಧವಾಗುತ್ತದೆ.

ಆದರೂ ರಾಷ್ಟ್ರೀಕೃತ ಬ್ಯಾಂಕುಗಳು ಈ ದಿಶೆಯಲ್ಲಿ ತ ಹೆಣಗಾಡಬೇಕಾಗಿದೆ. ನಿರುದ್ಯೋಗ ಸಮಸ್ಯೆ

ಗ್ರಾಮಾಂತರ ಪ್ರದೇಶದಲ್ಲಿಯೇ ಬಹಳ. ಕಾರಣ ಆಯಾ ಭಾಗದಲ್ಲಿನ ರಾಷ್ಟ್ರೀಕೃತ ಬ್ಯಾಂಕುಗಳು ನಿರುದ್ಯೋಗದ ಸಂಖ್ಯೆಯನ್ನು ಅಂದಾಜಿಸಿ ಅದೇ ಭಾಗದಲ್ಲಿ ಸ್ಥಾಪನೆಯಾಗುವ ಹೊಸ ಉದ್ಯೋಗಗಳಲ್ಲಿ ಸೇರ್ಪಡೆಯಾಗುವಂತೆ ಮಾಡಬೇಕು. ಹಳ್ಳಿಯ ಸಮಸ್ಯೆ ಹಳ್ಳಿಯಲ್ಲಿಯೇ ಸಾಧ್ಯವಿದ್ದಷ್ಟು ಬಿಡಿಸುವ ಪ್ರಯತ್ನವಾಗಬೇಕು. ವಲಯದ ನಿರುದ್ಯೋಗದ ಸಮಸ್ಯೆ ವಲಯ ಮಟ್ಟದಲ್ಲಿಯೇ ಬಿಡಿಸುವಂತಾದರೆ ಈ ಬೃಹತ್ ಸಮಸ್ಯೆಯನ್ನು ಹಿಡಿತದಲ್ಲಿ ತರಬಹುದೆಂದು ಅನಿಸುವದು. ಈ ನಿರುದ್ಯೋಗ ಸಮಸ್ಯೆ ಹಾಗೆಯೇ ಬೆಳೆಯಗೊಟ್ಟರೆ ನಿರುದ್ಯೋಗಿ ಯುವಕರಲ್ಲಿ ಅಶಾಂತಿ ಬೆಳೆದು ಪ್ರಗತಿಯು ಕುಂಠಿತವಾಗುವದಲ್ಲದೆ ಸಮಾಜದಲ್ಲಿ ಶಾಂತಿ ನೆಲಸಲಾರದು. ಆದ್ದರಿಂದ ಈ ಸಮಸ್ಯೆಯ ತೀವ್ರತೆ ಕಡಿಮೆಯಾಗುವಂತೆ ಮಾಡುವದರಲ್ಲಿ ಸರಕಾರಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳು, ಸಕ್ರಿಯ ಸಹಕಾರ ನೀಡಬೇಕು.

೫. ಗೊಬ್ಬರದ ಗ್ಯಾಸು (Gobar Gas Plant) ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು

ದೇಶದ ವಿದ್ಯುಚ್ಛಕ್ತಿಯ ಕೊರತೆ ಮತ್ತು ಇಂಧನದ ಕೊರತೆಯನ್ನು ಕಡಿಮೆ ಮಾಡಲು ಸರಕಾರವು ಒಂದು

ಹೊಸ ಯೋಜನೆಯನ್ನು ಬೆಳಕಿಗೆ ತಂದಿದೆ. ಗ್ರಾಮಾಂತರ ಪ್ರದೇಶದಲ್ಲಿ ಬೇಕಾದ ವಿದ್ಯುಚ್ಛಕ್ತಿ ಮತ್ತು ಇಂಧನದ ಬೇಡಿಕೆಯನ್ನು ಗೊಬ್ಬರ ಗ್ಯಾಸಿನ ಮುಖಾಂತರ ಹೋಗಲಾಡಿಸುವ ಯೋಜನೆಯನ್ನು ಸಿದ್ಧಮಾಡಿ ಜನತೆಯ ಮುಂದೆ ಇಟ್ಟಿದೆ. ಈ ಯೋಜನೆಯನ್ನು ತಯಾರಿಸುವ ಮುಖ್ಯ ಗುರಿ ಎಂದರೆ, ಇದು ಸಾಧಿಸಲ್ಪಟ್ಟರೆ, ಇಂಧನದ ಕೊರತೆಯನ್ನು ಕಡಿಮೆ ಮಾಡಬಹುದು. ಈ ರೀತಿಯಾಗಿ ಉಳಿತಾಯವಾದ ವಿದ್ಯುಚ್ಛಕ್ತಿಯನ್ನು ಬೃಹತ್ ಉದ್ಯೋಗಕ್ಕೆ ಉಪಯೋಗಿಸಿದರೆ ಉತ್ಪಾದನೆ ಹೆಚ್ಚುವದು. ಮತ್ತು ಹಳ್ಳಿಯಲ್ಲಿ ವಿಪುಲವಾಗಿ ಸಿಗುವ ಸಂಪನ್ಮೂಲಗಳಿಂದ ಈ ಯೋಜನೆಯನ್ನು ಯಾವದೇ ಕಷ್ಟವಿಲ್ಲದೆ ಕಾರ್ಯಗತ ಮಾಡಬಹುದು ಎಂಬ ಉದ್ದೇಶದಿಂದ ಈ ಯೋಜನೆಯನ್ನು ಹಾಕಿಕೊಂಡಿದೆ. ಈ ಯೋಜನೆಯು ಅಖಿಲ ಭಾರತ ಖಾದಿ ಮತ್ತು ಗ್ರಾಮೀಣ ಉದ್ದಿಮೆಗಳ ಮಂಡಳಿಯ (All India Khadi and Village Industries) ಮುಖಾಂತರ ಕೈಗೊಳ್ಳಲಾಗುತ್ತಿದೆ.

ಈ ಯೋಜನೆಗೆ ಸಾಲಕೊಡಲು ರಾಷ್ಟ್ರೀಕೃತ ಬ್ಯಾಂಕುಗಳಿಗೆ ತಿಳಿಸಲಾಗಿದೆ. ಈ ಯೋಜನೆಯ ವೆಚ್ಚ ಸುಮಾರು [illegible]೦ ಕೋಟಿ ರೂಪಾಯಿಗಳು ಮತ್ತು ಪ್ರತಿ ಗ್ಯಾಸಿನ ವೆಚ್ಚ ಸುಮಾರು ೩,೮೦೦ ರೂಪಾಯಿಗಳು. ಇದರ ಪ್ರತಿಶತ ೮೫ ರಷ್ಟು ಬ್ಯಾಂಕು ಮತ್ತು ಉಳಿದ ಪ್ರತಿಶತ ೧೫ ರಷ್ಟು

ಗ್ಯಾಸಿನ ಮಾಲಕನು ಬಂಡವಾಳ ಹಾಕಬೇಕೆಂಬ ಯೋಜನೆಯು ಉದ್ದೇಶ. ಇದಲ್ಲದೆ ಅದಕ್ಕೆ ಬೇಕಾದ ತಾಂತ್ರಿಕತೆ ಇತ್ಯಾದಿ ಸರಕಾರವು ಪುಕ್ಕಟೆಯಾಗಿ ಕೊಡಲು ಒಪ್ಪಿದೆ.

ಇಷ್ಟು ಹಗುರಾದ ಯೋಜನೆಯಿದ್ದರೂ, ಸಾಕಷ್ಟು ಜನತೆ ಮುಂದೆ ಬಂದಿಲ್ಲ ಎಂದು ಇತ್ತೀಚಿನ ಸಮೀಕ್ಷೆಯ ಪ್ರಕಾರ ಸಿದ್ಧವಾಗಿದೆ. ಸರಕಾರವು ೫ ನೆಯ ಪಂಚವಾರ್ಷಿಕ ಯೋಜನೆ ಮುಗಿಯುವದರಲ್ಲಿ ಸುಮಾರು ೫,೦೦,೦೦೦ ಗೊಬ್ಬರ ಗ್ಯಾಸ ಪ್ಲ್ಯಾಂಟುಗಳನ್ನು ದೇಶದಾದ್ಯಂತ ನೆಡಲು ಗುರಿಯಿಟ್ಟು, ಇದೇ ವರುಷದಲ್ಲಿ ಅಂದರೆ ೭೫–೭೬ ರಲ್ಲಿ ೧ ಲಕ್ಷಕ್ಕೂ ಹೆಚ್ಚು ಸ್ಥಾವರಗಳನ್ನು ಸಿದ್ಧಗೊಳಿಸುವ ಗುರಿ ಇಟ್ಟುಕೊಂಡಿದೆ. ಈ ಸಂಪೂರ್ಣ ಯೋಜನೆ ಬರಿಯ ಗುರಿ ಮುಟ್ಟುವದಷ್ಟೇ ಅಲ್ಲ, ಅದು ಭಾರೀ ಪ್ರಮಾಣದಲ್ಲಿ ವ್ಯಾಪಕವಾಗುವಂತೆ ಜನತೆ, ಸರಕಾರ ಪ್ರಯತ್ನಿಸಬೇಕು. ಯಾಕಂದರೆ ಈ ಯೋಜನೆಯಿಂದ ಕೆಳಗಿನ ಲಾಭಗಳು ಗ್ರಾಮೀಣ ಜನತೆಗೆ ಆಗುವದರಲ್ಲಿ ಸಂದೇಹವಿಲ್ಲ :

೧ ದನಗಳ ಸೆಗಣಿಯು ತನ್ನ ಮೊದಲಿನ ಮೊತ್ತಕ್ಕಿಂತ ಹೆಚ್ಚು ಮತ್ತು ಒಳ್ಳೆಯ ಗುಣವನ್ನು ಪಡೆಯುವದರಿಂದ ಉತ್ತಮವಾದ ಗೊಬ್ಬರವಾಗುವದು.

ಪ್ಲ್ಯಾಂಟಿನಲ್ಲಿ ಹಾಕಿದ ಇತರ ಕಚ್ಚಾವಸ್ತುಗಳ ಸಂಯೋಜನೆಯಿಂದ ಗೊಬ್ಬರದ ಗುಣಮಟ್ಟ ಹೆಚ್ಚು ವದು.

ಈ ಯೋಜನೆಯು ಮುಖಾಂತರ ಹೊರಹೊರಟ ಗೊಬ್ಬರ ಹೆಚ್ಚು ನೈಟ್ರೋಜನ್ಯವಾದುದು. ತಜ್ಞರ ಹೇಳಿಕೆಯು ಪ್ರಕಾರ ಬರಿ ಸೆಗಣಿಯನ್ನೇ ಗೊಬ್ಬರದಂತೆ ಉಪಯೋಗಿಸಿದರೆ ಕೇವಲ ಪ್ರತಿ ಶತ ೦.೭೫ ನೈಟ್ರೋಜನ್ ಸಿಕ್ಕರೆ ಅದನ್ನೇ ಗೋಬರ ಗ್ಯಾಸಿನಲ್ಲಿ ಹಾಕಿ ಉಪಯೋಗಿಸಿದರೆ ಅದರ ನೈಟ್ರೋಜನದ ಪ್ರಮಾಣ ಪ್ರತಿ ಶತ ೨ ರಷ್ಟು ಆಗುವದರಿಂದ ಇಂಥ ಗೊಬ್ಬರವು ಬೆಳೆಗಳಿಗೆ ಹೆಚ್ಚು ಪೌಷ್ಟಿಕವಾದುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಇಷ್ಟೇ ಅಲ್ಲ ಇದರಿಂದ ಹೊರಟಂಥ ಬೆಳಕು ಪೆಟ್ರೋ ...ಮ್ಯಾಕ್ಸ ಗ್ಯಾಸಿನಕಿಂತಲೂ ಉತ್ತಮವಿದ್ದು ಅದರಿಂದ ಸಣ್ಣ ...ರೇಟರುಗಳೂ ನಡೆಯುವ ಸಾಧ್ಯತೆ ಇದೆ ಎಂದು ...ಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಇತ್ತೀಚಿನ ಸಮೀಕ್ಷೆಯಿಂದ ಮಲವೂ (Human ...ght Soil) ಕೂಡ ದನಗಳ ಸೆಗಣಿಯಷ್ಟೇ ಶಕ್ತಿಯುತ ...ದ್ದರಿಂದ ಅದರಿಂದಲೂ ಈ ಗೋಬರ ಗ್ಯಾಸ ...ಂಟನ್ನು ನಿರ್ಮಿಸಬಹುದೆಂದು ಹೇಳಲಾಗುತ್ತಿದೆ. ...ೀಬರ ಗ್ಯಾಸಿಗೆ ಬೇಕಾದ ಕಚ್ಚಾ ಸಾಮಗ್ರಿಗಳು

ಪುಕ್ಕಟೆಯಾಗಿ ದೊರೆಯುವದರಿಂದ ಅದನ್ನು ಕಟ್ಟುವ ಹೊಣೆಯನ್ನು ರಾಷ್ಟ್ರೀಕೃತ ಬ್ಯಾಂಕುಗಳು ಒಂದು ವಿಶೇಷ ಯೋಜನೆ ಎಂದು ಪರಿಗಣಿಸಿ ಈ ದಿಶೆಯಲ್ಲಿ ಪ್ರಯತ್ನ ಪಟ್ಟಿದ್ದಾದರೆ ಗುರಿ ಮುಟ್ಟುವದಷ್ಟೇ ಅಲ್ಲ ಅದನ್ನು ದ್ವಿಗುಣಗೊಳಿಸಲೂ ಬಹುದು.

ಇಂಧನದ ಕೊರತೆಯ ತಾಕಲಾಟದಲ್ಲಿದ್ದ ನಮ್ಮ ದೇಶಕ್ಕೆ ಈ ಯೋಜನೆ ಅತಿ ಮಹತ್ವದ್ದು. ಕೋಟ್ಯಾನುಗಟ್ಟಲೆ ಹಣ ಖರ್ಚು ಮಾಡುವಂಥ ಹೈಡ್ರೋ ಇಲೆಕ್ಟ್ರಿಕ್ ಪ್ರೊಜೆಕ್ಟನ ಕಡೆಗೆ ಲಕ್ಷ್ಯವಹಿಸದೇ ನಿಸರ್ಗದತ್ತ ಸಂಪನ್ಮೂಲಗಳ ಉಪಯುಕ್ತತೆಯ ಸಲುವಾಗಿ ಈ ಯೋಜನೆಯನ್ನು ಕಾರ್ಯಗತ ಮಾಡಿದರೆ ಉದ್ದೇಶವು ಫಲಿಸಿ ಆರ್ಥಿಕ ತೊಂದರೆಯನ್ನು ಮತ್ತು ಇಂಧನದ ಕೊರತೆಯನ್ನು ಹೋಗಲಾಡಿಸಬಹುದು.

ಇತ್ತೀಚಿನ ಅನುಭವದ ಪ್ರಕಾರ ಸಾಕಷ್ಟು ಉತ್ತೇಜನ ರಾಷ್ಟ್ರೀಕೃತ ಬ್ಯಾಂಕುಗಳಿಂದ ಇಂತಹ ಘಟಕಗಳಿಗೆ ಸಿಕ್ಕಿಲ್ಲ ಎಂದು ಕಂಡುಬಂದಿದೆ. ೨೦–೩೦ ದನಗಳನ್ನು ಸಾಕಿದ ಒಕ್ಕಲಿಗನಿಗೆ ೩,೨೩೦ (೮೫% of ೩,೮೦೦) ರೂಪಾಯಿಗಳನ್ನು ತಿರುಗಿ ಮುಟ್ಟಿಸುವ ಸಾಮರ್ಥ್ಯವನ್ನು ಬ್ಯಾಂಕರನು ಸಂಶಯಿಸಿದರೆ ಹಾಸ್ಯಾಸ್ಪದವಾದೀತು. ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕರನು ಮನಸ್ಸು ಮಾಡಿ ಈ ಯೋಜನೆಯ ಲಾಭ ಹಳ್ಳಿಯ ಜನರಿಗೆ ಸಾಕಷ್ಟು ಆಗುವಂತೆ ಪ್ರಯತ್ನಿಸ

...ವಲ್ಲದೆ ಈ ಯೋಜನೆ ಬೃಹತ್ ರೀತಿಯಿಂದ ಕೈಕೊಂಡು ...ಂಧನದ ಕೊರತೆ ಹೋಗಲಾಡಿಸುವ ಪ್ರಯತ್ನದಲ್ಲಿ ...ನ್ನಾದರೂ ಅವನು ಸಕ್ರಿಯವಾದ ಪಾತ್ರವನ್ನು ...ರ್ವಹಿಸಲಿ ಎಂದು ಸೂಚಿಸುವೆ.

೬. ಠೇವು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು

ಗ್ರಾಮಾಂತರ ಪ್ರದೇಶಗಳಲ್ಲಿ ಶಾಖೆಗಳನ್ನು ತಗೆದು ...ಣ್ಣ ಉಳಿತಾಯವನ್ನು ಶೇಖರಿಸಿ ಅವುಗಳನ್ನು ರಾಷ್ಟ್ರ ...ರ್ಮಾಣ ಕಾರ್ಯದಲ್ಲಿ ತೊಡಗಿಸುವದು ರಾಷ್ಟ್ರೀಕರಣದ ...ದ್ದೇಶವಾಗಿತ್ತು ಎಂಬುದನ್ನು ನಾನು ಪ್ರಾರಂಭದಲ್ಲಿ ...ಮನಿಸಿದ್ದೇನೆ. ಅರ್ಥಶಾಸ್ತ್ರಜ್ಞರ ಅಭಿಪ್ರಾಯವೆಂದರೆ ...ಂತಹ ಸಣ್ಣ ಉಳಿತಾಯ ನಿಜವಾದ ಉಳಿತಾಯ. ಇದರಿಂದ ...ರ್ಥಿಕ ಬೆಳವಣಿಗೆ ತ್ವರಿತಗತಿಯಿಂದ ಆಗುವದೆಂದು ...ಳಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳ ...ವಣಿಯನ್ನು ಕೂಡಿಸುವ ಕಾರ್ಯದಲ್ಲಿ ಬ್ಯಾಂಕುಗಳು ...ಸ ವೇಷವನ್ನು ಹಾಕಬೇಕಾಗಿದೆ.

ಕಪ್ಪು ಹಣ ನಮ್ಮ ಆರ್ಥಿಕ ಮುಗ್ಗಟ್ಟಿಗೆ ಕಾರಣ ...ದು ಹೇಳುವರು. ಮತ್ತು ಇಂಥ ಕಪ್ಪು ಹಣದ ಚರ್ಚೆ

ಸಾಕಷ್ಟು ನಡೆದಿದೆ. ಕಪ್ಪು ಹಣವನ್ನು ಎರಡು ವಿಧವಾಗಿ
ವಿಂಗಡಿಸಬಹುದು.

೧ ಉದ್ದೇಶ ಪೂರ್ವಕ ರೂಪುಗೊಂಡ ಕಪ್ಪು ಹಣ.

೨ ತಿಳುವಳಿಕೆ ಇಲ್ಲದೆ ರೂಪುಗೊಂಡ ಕಪ್ಪು ಹಣ.

ಮೊದಲನೆಯು ವರ್ಗದಲ್ಲಿ ಪರಿಗಣಿಸಲ್ಪಟ್ಟ ಕಪ್ಪು
ಹಣವು ಉದ್ದೇಶ ಪೂರ್ವದಿಂದ ಹುಟ್ಟಿಸಿ ಅದರಿಂದ
ಸರಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ತಪ್ಪಿಸಿಕೊಳ್ಳುವ
ದಾದರೆ, ಎರಡನೆಯದು ಇದಾವ ವಿಚಾರವಿಲ್ಲದೆ ಇದ್ದಂಥ
ಉಳಿತಾಯ. ಎಲ್ಲಿ ಉಪಯೋಗ ಮಾಡಬಹುದು ಎಂಬ
ವಿಚಾರವಿಲ್ಲದೆ ಹಾಗೆಯೇ ಮನೆಯಲ್ಲಿಟ್ಟ ಹಣ. ಇವೆರಡೂ
ನಿಜವಾದ ಅರ್ಥದಲ್ಲಿ ಕಪ್ಪು ಹಣವೇ. ಇವೆರಡರ
ಪರಿಣಾಮವು ಆರ್ಥಿಕ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ
ವನ್ನೇ ಬೀರಬಲ್ಲವು. ಪರಂತು ಈಗ ಬ್ಯಾಂಕರನು ತನ್ನ
ಜಾಣ್ಮೆಯಿಂದ ಇವೆರಡನ್ನು ಕಡಿಮೆ ಮಾಡುವ ವಿಧಾನವನ್ನು
ಹುಡುಕಿ ಆದಷ್ಟು ಮಟ್ಟಿಗೆ ಕಪ್ಪು ಹಣವನ್ನು ಬಿಳಿಹಣವಾಗಿ
ಪರಿವರ್ತನೆ ಮಾಡುವದಲ್ಲದೆ, ಅದು ಆರ್ಥಿಕ ಬೆಳವಣಿಗೆ
ಯಲ್ಲಿ ತ್ವರಿತಗತಿಯಿಂದ ಒದಗಿಬರಲು ಸಾಧ್ಯವಾಗುವಂತೆ
ಕ್ರಮಗಳನ್ನು ಕೈಗೊಳ್ಳಬೇಕು. ಈ ದಿಶೆಯಲ್ಲಿ ಬ್ಯಾಂಕರನ
ಪಾತ್ರವನ್ನು ಈ ಕೆಳಗಿನಂತೆ ವರ್ಣಿಸಬಹುದು :

೧ ಬ್ಯಾಂಕರನು ತನ್ನ ಪ್ರದೇಶದಲ್ಲಿಯ ಜನರ ಮನೋ
ಭೂಮಿಕೆಯನ್ನು ಅರಿತು ಅವರಿಗೆ ಒಗ್ಗುವಂತೆ ಬೇ

ಬೇರೆ ವಿಧದ ಪಾತ್ರೆಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು. ಶಕ್ಯವಿದ್ದಷ್ಟು ಬ್ಯಾಂಕಿನಲ್ಲಿಟ್ಟ ತನ್ನ ಹಣ ಸುರಕ್ಷಿತವಾದ ಪೆಟ್ಟಿಗೆಯಲ್ಲಿ ಇದೆ ಎಂಬ ಭಾವನೆ ಬರುವಂತೆ ವರ್ತಿಸತಕ್ಕದ್ದು.

೨ ಸರಕಾರದ ಕಾಯಿದೆ, ನಿಯಮಾವಳಿ ಮತ್ತು ಧೋರಣೆಗಳನ್ನು ಜನರಲ್ಲಿ ಸ್ಪಷ್ಟವಾಗಿ ತಿಳಿಹೇಳಿ ಕೊಡಬೇಕು. ಏಕೆಂದರೆ ಇತ್ತೀಚಿನ ರಾಷ್ಟ್ರೀಕರಣದ ಹಾವಳಿಯಿಂದ ಜನರ ಮನಸ್ಸು ಕಲ್ಮಷವಾಗಿದೆ ಎಂದು ಹೇಳಬಹುದು. ಎಷ್ಟೋ ಜನರಲ್ಲಿ ಈಗ ಹೊರಟ ದಟ್ಟ ಸುದ್ದಿಯೆಂದರೆ ಎಲ್ಲ ನಿಯಮಿತ ಅವಧಿ ಠೇವಣಿ (Fixed Deposits) ಯನ್ನು ಸರಕಾರವು ತಗೆದುಕೊಳ್ಳುವದೆಂದು. ಇದು ಸತ್ಯಕ್ಕೆ ಅತಿ ದೂರವಾದ ಸಂಗತಿ. ಏಕೆಂದರೆ ಇಂತಹ ತರದ ಠೇವು ಸರಕಾರದ ವಿಚಾರದಂತೆಯೇ ಉಪ ಯೋಗಿಸಲ್ಪಡಹತ್ತಿದೆ. ಎಂದಮೇಲೆ, ಅದನ್ನು ರಾಷ್ಟ್ರೀಕರಿಸುವ ಪ್ರಶ್ನೆಯೇ ಏಳದು– ಎಂದು ಚೆನ್ನಾಗಿ ಮನವರಿಕೆಯಾಗುವಂತೆ ತಿಳಿಹೇಳಬೇಕು.

೩ ಪ್ರತಿಯೊಬ್ಬನಿಗೂ ಉಳಿತಾಯದ ಮಹತ್ವವನ್ನು ತಿಳಿಸಿಕೊಡುವದಕ್ಕಾಗಿ ಬ್ಯಾಂಕರನು ಸಭೆ, ಸಮ್ಮೇಲನ ಗಳನ್ನು ಮಾಡಿ ತಿಳಿಸಿಕೊಡಬೇಕು. ಸಾಧ್ಯವಿದ್ದರೆ ಗ್ರಾಮಾಂತರ ಪ್ರದೇಶದಲ್ಲಿಯ ಮ್ಯಾನೇಜರರು ಸುಪ್ತ

ಶೇವಣಿದಾರರ ಮನೆ ಮನೆಗೆ ಹೋಗಲೂ ಹಿಂಜರಿಯು ಬಾರದು. ಎಷ್ಟೋ ಜನರಲ್ಲಿ ಬ್ಯಾಂಕಿನಲ್ಲಿಡಲು ಹಣವಿದ್ದರೂ "ಎಲ್ಲಿ ಬಿಡಪ್ಪಾ ನಮಗ್ಯಾಕ ಬೇಕು" ಎನ್ನುವ ಮನೋಭಾವನೆ ಹೊಂದಿದವರಿರುವದರಿಂದ ಅಂತಹವರಿಗೆ ಸಂಪೂರ್ಣ ಮನವರಿಕೆಯಾಗುವಂತೆ ಮಾಡಿಕೊಡಬೇಕು. ೨೫ ಪೈಸೆಯಿಂದ ಹಿಡಿದು ಕೊಂಡು ಎಂತಹದೇ ಮೊತ್ತದ ಶೇವಣಿ ಹಿಡಿಯು ವದರಲ್ಲಿ ಬ್ಯಾಂಕರನು ಹಿಂಜರಿಯಬಾರದು.

೪ ಹೊಸ ಹೊಸ ಶೇವಣಿಯ ಯೋಜನೆ ಮಾಡಿ ಅದನ್ನು ಜನತೆಗೆ ತಿಳಿಹೇಳಿ ಅವರು ಶಕ್ಯವಿದ್ದಷ್ಟು ಉಳಿತಾಯ ಮಾಡುವಂತೆ ಪ್ರೇರೇಪಿಸಬೇಕು.

೫ ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಜನಸಂಖ್ಯೆ ಪ್ರತಿ ಶತ ೫೦ ರಷ್ಟು ಇದ್ದರೂ ಯಾರೂ ಬ್ಯಾಂಕಿಗೆ ಬಾರ ದಿರುವದು ವಿಷಾದದ ಸಂಗತಿ. ಇದನ್ನು ಹೋಗ ಲಾಡಿಸಲು ಮಹಿಳಾ ಕಾರಕೂನರನ್ನು ನಿಯಮಿಸ ಬೇಕು. ಇದಲ್ಲದೆ ಪ್ರತಿ ಬ್ಯಾಂಕು ಒಬ್ಬ ಮಹಿಳಾ ಪಿಗ್ಮಿ ಕಲೆಕ್ಟರ ಎಂದು ನಿಯಮಿಸಕೊಳ್ಳಬೇಕು. ಯಾಕಂದರೆ ಸಾವಿರಾರು ರೂಪಾಯಿಗಳು ಗ್ರಾಮೀಣ ಮಹಿಳೆಯರ ಕೈಯಲ್ಲಿದ್ದು ಅಲ್ಲಿ ಇಲ್ಲಿ ಬಿದ್ದು ದುಡ್ಡು ವ್ಯರ್ಥವಾಗಿ ಹಾಳಾಗುವವಲ್ಲದೆ ಪ್ರಯೋಜನ ಕಾರಿಯಲ್ಲದ ಸಾಮಾನುಗಳ ಕೊಳ್ಳುವಿಕೆಯಲ್ಲಿ ಉಪ ಯೋಗಿಸಲ್ಪಡುವದರಿಂದ ಇದು ಆರ್ಥಿಕ ಸ್ಥಿತಿಯ

ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಈ ದಿಶೆಯಲ್ಲಿ ಅವರಿಗೆ ಉಳಿಸುವ ಹವ್ಯಾಸವನ್ನಷ್ಟೇ ಕಲಿಸದೆ ಹೆಚ್ಚು ಹೆಚ್ಚು ಉಳಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅವರು ಹೇಗೆ ಸಹಾಯಕರಾಗಬಲ್ಲರೆಂಬುದನ್ನು ಮನಗಾಣಿಸಿಕೊಡಬೇಕು. ಈ ದಿಶೆಯಲ್ಲಿ ಮಹಿಳಾ ಪಿಗ್ಮಿ ಮತ್ತು ಮಹಿಳಾ ಕಾರಕೂನರು ಮನೆ ಮನೆಗೆ ಹೋಗಿ ಎಚ್ಚರಿಸಬೇಕು. ಇತ್ತಿತ್ತಲಾಗಿ ಮಹಿಳಾ ಕಾರಕೂನರ ನೇಮಣೂಕತೆಯಾಗಹತ್ತಿದ್ದರೂ ಅದು ಕೇವಲ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದೆ. ಅದು ಹಳ್ಳಿಯ ಬ್ಯಾಂಕುಗಳಿಗೂ ವಿಸ್ತರಿಸಬೇಕು.

೬ ಬ್ಯಾಂಕಿನ ಸಿಬ್ಬಂದಿ ವರ್ಗದಲ್ಲಿ ಪೈಪೋಟಿಯನ್ನು (competition) ಹುಟ್ಟಿಸಿ, ಅವರು ಜನತೆಯ ಕೂಡ ಹೆಚ್ಚು ಹೆಚ್ಚು ಬೆರೆಯುವಂತೆ ಮಾಡಬೇಕು. ಈ ದಿಶೆಯಲ್ಲಿ ಅವರು ಕಾರ್ಯಾಸಕ್ತರಾಗುವಂಥ ಯೋಜನೆಗಳನ್ನು ನಿರ್ಮಿಸಬೇಕು. ರಾಷ್ಟ್ರೀಕೃತ ಬ್ಯಾಂಕು ಎಂದ ಮಾತ್ರಕ್ಕೆ ಸಿಬ್ಬಂದಿಯಲ್ಲಿ ಶಿಥಿಲತೆ ಹುಟ್ಟಬಹುದೆಂಬ ಶಂಕೆಯನ್ನು ನಿವಾರಿಸಬೇಕು. ಯಾಕೆಂದರೆ ಬ್ಯಾಂಕಿನ ಬೆಳವಣಿಗೆ ಸಿಬ್ಬಂದಿಯ ಮೇಲೆಯೇ ಅವಲಂಬಿಸಿದೆ.

೭ ಸಾಧ್ಯವಿದ್ದರೆ ಠೇವಣಿ ದಲ್ಲಾಲಿಗಳನ್ನು ನಿಯಮಿಸ ಬೇಕು. ಇದರಲ್ಲಿ ನಾವು ಜೀವವಿಮೆಯನ್ನು ಅನುಸರಿಸಿದರೆ ಒಳಿತು ಎಂದು ಎನಿಸುವದು. ದಲ್ಲಾಳಿಗಳಿಗೆ ಹೆಚ್ಚಿನ ಮೊತ್ತದ ಕಮೀಶನ್ ವಗೈರೆ ತೋರಿಸುವದರಿಂದ ಹೆಚ್ಚು ಹೆಚ್ಚು ಹುರುಪಿನಿಂದ ಜನರಿಗೆ ಭೆಟ್ಟಿಯಾಗಿ ಠೇವಣಿಯ ಎಲ್ಲ ನಿಯಮಗಳನ್ನು ತಿಳಿಸಿಕೊಟ್ಟು ಠೇವಣಿ ಹೆಚ್ಚಿಸುವದರಲ್ಲಿ ಬ್ಯಾಂಕು ತನ್ನ ದಲ್ಲಾಲಿಗಳಿಗೆ ಸಹಾಯವಾಗಬೇಕು. ಯಾಕಂದರೆ ಗ್ರಾಮಾಂತರ ಪ್ರದೇಶದಲ್ಲಿ ಜನರು ಅಶಿಕ್ಷಿತರಿದ್ದು ಏನೋ ಮೂಢನಂಬಿಕೆಯಲ್ಲಿ ಬಿದ್ದು ಪ್ರಗತಿಯನ್ನೇ ಕುಂಠಿತಗೊಳಿಸಿದ್ದಾರೆ. ಇಂತಹವರಿಗೆ ಸೂಕ್ತವಾದ ಮಾರ್ಗದರ್ಶನವೀಯಲು ಈ ದಲ್ಲಾಲಿಗಳು ಹಳ್ಳಿಯ ಜನಸ್ತೋಮದಲ್ಲಿ ನುಗ್ಗಬೇಕಾಗಿದೆ. ಈ ದಲ್ಲಾಲಿಗಳು ಕಾರ್ಯಾಸಕ್ತರಾಗಲು ವಿಧವಿಧ ಯೋಜನೆಗಳನ್ನು ನಿರೂಪಿಸುವ ಕೆಲಸ ಬ್ಯಾಂಕರನದು. ಇದನ್ನು ಸಾಧಿಸಿದರೆ ಬ್ಯಾಂಕಿನ ಪ್ರಚಾರವು ಸಾಕಷ್ಟು ಆಗಿ ಜನತೆಯ ದೃಷ್ಟಿ ಬ್ಯಾಂಕಿನ ಕಡೆಗೆ ಹರಿಯುವದರಲ್ಲಿ ಯಾವ ಸಂಶಯವೂ ಇಲ್ಲ.

ಈ ರೀತಿಯಾಗಿ ಜನತೆಯಲ್ಲಿದ್ದ ಹಣ ಬ್ಯಾಂಕಿಗೆ ಸೇರಿ ಬ್ಯಾಂಕಿನ ಮುಖಾಂತರ ಅದು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗಬೇಕಾಗಿದೆ. ಈ ಉದ್ದೇಶವು ರಾಷ್ಟ್ರೀಕರಣ ಮಾಡುವ ಕೆಲವೊಂದು ಉದ್ದೇಶಗಳಲ್ಲಿ ಒಂದಾಗಿದೆ

ಂದು ಹೇಳಬಹುದು. ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ
ನ್ನು ರಾಷ್ಟ್ರೀಕೃತ ಬ್ಯಾಂಕುಗಳು ಈಗಾಗಲೇ ಸಾಧಿಸಿವೆ
ನ್ನಬಹುದು. ಇದು ಕೆಳಗಿನ ಅಂಕಿಸಂಖ್ಯೆಗಳಿಂದ ವಿಧಿತ
ಗುತ್ತದೆ :

ಎಲ್ಲ ವಾಣಿಜ್ಯ ಬ್ಯಾಂಕುಗಳ ಒಟ್ಟು ಠೇವು ೧೯೬೯
ರ ಜುಲೈಗೆ ೪೬೪೬ ಕೋಟಿ ರೂಪಾಯಿ ಇದ್ದರೆ ಅದು
೭೪ ರ ಕೊನೆಗೆ ೧೦,೬೩೫ ಕೋಟಿ ರೂಪಾಯಿಗೆ ಏರಿದೆ.
ತ್ತು ರಾಷ್ಟ್ರೀಕೃತ ಬ್ಯಾಂಕುಗಳನ್ನಷ್ಟೇ ತಗೆದುಕೊಂಡರೆ
೬೯ ರ ಜುಲೈಗೆ ಒಟ್ಟು ಠೇವು ೩೮೭೨ ಕೋಟಿ ರೂಪಾಯಿ
ದ್ದರೆ ಅದೇ ೧೯೭೪ ರ ಕೊನೆಗೆ ೮,೯೩೪ ಕೋಟಿ
ಪಾಯಿಗಳು. ಅಂದರೆ ನಿವ್ವಳ ಹೆಚ್ಚಳ ೫,೦೬೨ ಕೋಟಿ
ಪಾಯಿಗಳು. ಪರಂತು ಠೇವಣಿಯಲ್ಲಿ ಇಷ್ಟೊಂದು
ಚ್ಚಳ ಕಂಡುಬಂದರೂ ಇದು ಹೆಚ್ಚಾಗಿ ಪಟ್ಟಣಗಳಿಂದಲೇ
ಗ್ರಹಿಸಿದ್ದು ಎಂದು ಹೇಳಬಹುದು. ಗ್ರಾಮಾಂತರ
ದೇಶದಲ್ಲಿಯ ಠೇವಣಿಯ ಶಕ್ಯತೆ ಎಷ್ಟೇ ಹೆಚ್ಚಿರುವದ
ದ ಅದನ್ನು ಬ್ಯಾಂಕಿನ ವ್ಯಾಪ್ತಿಗೆ ಎಳೆತರುವ ಜವಾಬ್ದಾರಿ
ನ್ನು ಗ್ರಾಮಾಂತರ ಪ್ರದೇಶದಲ್ಲಿಯ ಶಾಖೆಗಳು ಇಂದು
ಡಬೇಕಾಗಿದೆ. ಈ ದಿಶೆಯಲ್ಲಿ ಮೇಲಿನ ಸಲಹೆಗಳನ್ನು
ಕ್ತವಾಗಿ ಕಾರ್ಯರೂಪದಲ್ಲಿ ತಂದರೆ ಈ ದಿಶೆಯಲ್ಲಿ
ಗತಿ ಸಾಧ್ಯ.

ಗ್ರಾಮೀಣ ಬ್ಯಾಂಕುಗಳು :

ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಆರ್ಥಿಕ ಸಮೀಕ್ಷೆ ಕೈಕೊಂಡು ಇಡೀ ಭಾಗದ ವೇಗದ ಬೆಳವಣಿಗೆಗೆ ಸಹಾಯಕವಾಗಲೆಂದು ಸರಕಾರವು ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದೆ. ಈ ಯೋಜನೆಯ ಪ್ರಕಾರ ದೇಶದಾದ್ಯಂತ ಸುಮಾರು ೫೦ ಗ್ರಾಮೀಣ ಬ್ಯಾಂಕುಗಳನ್ನು ತೆರೆಯುವ ಒಂದು ಬೃಹತ್ ಯೋಜನೆಯನ್ನು ನಿರೂಪಿಸಿ ಅದರಂತೆ ಅದನ್ನು ೧೯೭೫ ರ ಅಕ್ಟೋಬರ ೨ ರಂದು ಕಾರ್ಯರೂಪದಲ್ಲಿ ತರುವ ವಿಚಾರದಂತೆ ಕೆಲವೊಂದು ಬ್ಯಾಂಕುಗಳು ಈಗಾಗಲೇ ಪ್ರಾರಂಭಿಸಲ್ಪಟ್ಟಿವೆ. ನಮ್ಮ ರಾಜ್ಯದಲ್ಲಿ ಇಂತಹದೇ ಆದ ಒಂದು ಬ್ಯಾಂಕನ್ನು ತುಂಗಭದ್ರಾ ಆಯಕಟ್ಟಿನ ಜಾಗದಲ್ಲಿ ಹೊಸಪೇಟೆಯ ಹತ್ತಿರ ಬಳ್ಳಾರಿ ಮತ್ತು ರಾಯಚೂರ ಜಿಲ್ಲೆಗಳಿಗೆ ಸೀಮಿತವಾಗುವಂತೆ ತೆರೆಯಲಾಗಿದೆ. ಈ ಯೋಜನೆಯಂತೆ ಒಂದು ಬ್ಯಾಂಕು ಸುಮಾರು ೧ ಕೋಟಿ ಜನವಸತಿ ಇರುವ ಗ್ರಾಮೀಣ ಪ್ರದೇಶವನ್ನು ಸೀಮಿತವಾಗಿ ಇಟ್ಟುಕೊಂಡು ಆ ಭಾಗದ ಸರ್ವಾಂಗೀಣ ಉನ್ನತಿಯ ಸಲುವಾಗಿ ಹೆಣಗಾಡುವದು. ಈ ಪ್ರತಿಯೊಂದೂ ಬ್ಯಾಂಕು ತಮ್ಮ ತಮ್ಮ ಪ್ರದೇಶಕ್ಕೆ ಬೇಕಾಗುವ ನಿಯಮಗಳನ್ನೂ, ಪತ್ತಿನ ಧೋರಣೆಯನ್ನೂ, ಠೇವಣಿ ಯೋಜನೆಯನ್ನೂ, ಹಾಕಿಕೊಳ್ಳಲು ಸ್ವಾತಂತ್ರ್ಯತೆ ಹೊಂದಿವೆ.

ಈ ಯೋಜನೆಯು ಜಾಗತಿಕ ಬ್ಯಾಂಕಿನ ನೆರವಿನೊಂದಿಗೆ ರೂಪಿತವಾಗಿ ಕಾರ್ಯಗತವಾಗುವದು. ಈ ಐವತ್ತೂ ಬ್ಯಾಂಕುಗಳನ್ನು ೧೯೭೭ ಮಾರ್ಚ ಕೊನೆಯುದರೊಳಗಾಗಿ ತೆರೆಯುವ ವಿಚಾರವಿಟ್ಟುಕೊಂಡು ಭರದಿಂದ ಈ ದಿಶೆಯಲ್ಲಿ ಕೆಲಸ ನಡೆದಿದೆ.

ಇದರ ಮೂಲ ಉದ್ದೇಶವು ಸಣ್ಣ ಹಿಡುವಳಿದಾರರಿಗೆ ಮತ್ತು ಸಣ್ಣ ಕಸಬುದಾರರಿಗೆ ಸೌಲಭ್ಯ ನೀಡುವದಲ್ಲದೆ ಸಣ್ಣ ಉದ್ದಿಮೆಗಳು ಬೆಳೆಯುವದರಲ್ಲಿ ಎಲ್ಲ ರೀತಿಯ ಸೌಲಭ್ಯ ನೀಡುವ ಗುರಿಯಿಟ್ಟುಕೊಂಡಿದೆ. ಏಕೆಂದರೆ ಸಣ್ಣ ಕೈಗಾರಿಕೆ ಮತ್ತು ಒಕ್ಕಲುತನಕ್ಕೆ ಸೌಲಭ್ಯ ನೀಡುವ ಗುರಿಯನ್ನು ನಮ್ಮ ರಾಷ್ಟ್ರೀಕೃತ ಬ್ಯಾಂಕುಗಳು ಇಟ್ಟುಕೊಂಡಿದ್ದರೂ ಇಲ್ಲಿಯ ವರೆಗೆ ಬೇಕಾದ ಒಟ್ಟು ಪತ್ತಿನ ಶೇಕಡಾ ೩೦-೪೦ ಮಾತ್ರ ಲಭ್ಯವಾಗಿದೆ ಎಂದು ಹೇಳಬಹುದು. ಇದರಿಂದ ಈ ದಿಶೆಯಲ್ಲಿ ಎಷ್ಟು ಪ್ರಗತಿಯು ಆಗಬೇಕೋ ಆಗಿಲ್ಲ. ಕಾರಣ ಈ ಅಂತರವನ್ನು ತುಂಬಲು ಗ್ರಾಮೀಣ ಬ್ಯಾಂಕುಗಳು ಹುಟ್ಟಿಕೊಳ್ಳಬೇಕಾಯಿತು. ಈ ಯೋಜನೆಯು ನಿಜವಾಗಿಯೂ ಪ್ರಶಂಸನೀಯವಾದುದು. ಈ ಯೋಜನೆಯಿಂದ ಈ ಹೊತ್ತಿನವರೆಗೆ ಗ್ರಾಮಾಂತರ ಪ್ರದೇಶದಲ್ಲಿ ಆಗದೇ ಉಳಿದ ಕೆಲಸಗಳನ್ನು ಕೈಗೆತ್ತಿಕೊಂಡು ಆ ಪ್ರದೇಶದ ಬೆಳವಣಿಗೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಅವು ಕಾರ್ಯನಿರ್ವಹಿಸುವಂತೆ ಮಾಡುವ ಆಶೆ ಇಟ್ಟುಕೊಂಡಿವೆ. ಈ ಯೋಜನೆಯಿಂದ ನಿಜವಾದ ಪ್ರಗತಿ

ಸಾಧ್ಯವಾಗಬಹುದೆಂದು ಎನಿಸುವದು. ಇನ್ನೂ ಇದ
ಟಿಸು. ಅದರ ರೂಪರೇಷೆಗಳು ಈಗೀಗ ಸಿದ್ಧವಾಗಹತ್ತಿವೆ
ಕಾರಣ ಇನ್ನಿಷ್ಟು ಕಾಯ್ದು ಅವು ಹೇಗೆ ಬೆಳೆದು ಕಾರ್ಯಕ್ಷ
ವಾಗುವವೋ ನೋಡಬೇಕಾಗಿದೆ. ಅದನ್ನು ಕಾರ್ಯರೂ
ದಲ್ಲಿ ತರುವ ಪ್ರಸಂಗದಲ್ಲಿ ಬರುವ ಅಡ್ಡಿ ಆತಂಕಗಳನ
ಯಾವ ರೀತಿಯಿಂದ ತೊಡೆದುಹಾಕುತ್ತೇವೆ ಎನ್ನುವದ
ಮೇಲೆ ಆ ಯೋಜನೆಯ ಯಶಸ್ಸು ನಿಂತಿರುತ್ತದೆ.

೭. ಉಪಸಂಹಾರ

ಈ ಕೆಳಗೆ ಸೂಚಿಸಿರುವ ಸಲಹೆಗಳನ್ನು ಗಮ
ದಲ್ಲಿರಿಸಿದರೆ ನಿಜವಾಗಿಯೂ ಗ್ರಾಮಾಂತರ ಪ್ರದೇಶಗಳ
ಬ್ಯಾಂಕುಗಳನ್ನು ತೆರೆದ ಉದ್ದೇಶ ಸಾರ್ಥಕವಾಗುವದರ
ಯಾವ ಸಂಶಯವಿಲ್ಲ ಎಂದು ಹೇಳಬಹುದು.

ಸಣ್ಣ ಉದ್ದಿಮೆಗಳನ್ನು ಅಭ್ಯಸಿಸಿ ಅವುಗ
ಅನುಕೂಲಾಗ್ರವಾದ ಪತ್ತಿನ ಧೋರಣೆಯನ್ನು ನಿರೂಪಿಸು
ವಿಭಾಗ ಇನ್ನೂ ರಿಜರ್ವ ಬ್ಯಾಂಕಿನಲ್ಲಿ ತೆರೆಯದಿರುವ
ವಿಷಾದದ ಸಂಗತಿ. ಏಕೆಂದರೆ ಸುಸಜ್ಜಿತ ಔದ್ಯೋಗಿ
ವಲಯಕ್ಕಿಂತಲೂ ಮೂರು ಪಾಲು ಹೆಚ್ಚು ಉದ್ಯೋಗಾ
ಕಾಶವನ್ನು ಕಲ್ಪಿಸಿಕೊಡುವ ಸಣ್ಣ ಉದ್ದಿಮೆಗಳ ಬ

ಲ್ಲದೆ ಇರುವದು ವಿಷಾದನೀಯ. ಆದ್ದರಿಂದ ರಿಜರ್ವ ಬ್ಯಾಂಕು ಕೆಳಗಿನವುಗಳನ್ನು ತನ್ನ ವ್ಯಾಪ್ತಿಯಲ್ಲಿ ತಂದರೆ ಳಿತು.

೧) ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಗ್ರಾಮೀಣ ಭಿವೃದ್ಧಿ ವಿಭಾಗವೊಂದನ್ನು ತೆರೆಯಬೇಕು. ಇದರಿಂದ ತತವಾಗಿ ಗ್ರಾಮೀಣ ಜನತೆಗೆ ಸಂಬಂಧಪಟ್ಟಂಥಾ ಯೋಜನೆಯ ಬೆಳವಣಿಗೆಗೆ ಸೂಕ್ತವಾದ ಲಕ್ಷ್ಯವಹಿಸಲು ಹಾಯಕವಾಗುವದು.

೨) ರಿಜರ್ವ ಬ್ಯಾಂಕು ನಗರದಿಂದ ಗ್ರಾಮೀಣದ ಡೆಗೆ ಠೇವಣಿ ಹಣವನ್ನು ತಿರುಗಿಸುವ ಸೂಕ್ತವಾದ ರಾಪಾಡನ್ನು ಮಾಡಬೇಕು. ಮೊದಲು ಗ್ರಾಮೀಣ Rural) ದಿಂದ ನಗರದ ಕಡೆಗೆ ಠೇವಣಿಯನ್ನು ತಿರುಗಿಸಿ ನಗರಗಳಲ್ಲಿ ಔದ್ಯೋಗಿಕ ಬೆಳವಣಿಗೆಯಾಗುವಂತೆ ಮಾಡಿ, ಗ ಅದರ ವಿರುದ್ಧ ದಿಶೆಯಲ್ಲಿ ಠೇವಣಿಗಳ ಸಂಚಲನವಾಗ ಬೇಕಾಗಿದೆ. ಕೇವಲ ಗ್ರಾಮೀಣ ಯೋಜನೆಗಳು ಗ್ರಾಮೀಣ ಠೇವಣಿಗಳಿಗೆ ಮಾತ್ರ ಸೀಮಿತವಾಗಲಿ ಎಂದರೆ ಸಲ್ಲದು. ಚ್ಚಿನ ಪತ್ತಿನ ಧೋರಣೆಯನ್ನು ನಿರೂಪಿಸಿದರೇನೆ ಗ್ರಾಮೀಣ ಜನತೆಗೆ ನಿಜವಾಗಿಯೂ ಹೆಚ್ಚು ಹೆಚ್ಚಾದ ಪತ್ತಿನ ಸೌಕರ್ಯ ಸಿಕ್ಕು ಅವರ ಬೆಳವಣಿಗೆಯ ವೇಗ ಹೆಚ್ಚುವದು. ಲ್ಲವಾದರೆ ಸಮೀಕರಣ ಪದ್ಧತಿಯಿಂದ ಯಾವ ತ್ವರಿತ ಪ್ರಯೋಜನವಾಗದು.

೩) ಏನೇ ಅಡೆ-ತಡೆಗಳು ಬಂದರೂ ಅವುಗಳನ್ನು ಸಾಧ್ಯವಾದರೆ ಕಿತ್ತೊಗೆಯುವಂತೆ ಅಥವಾ ಸಡಿಲಿಸುವಂತೆ ಮಾಡಿ ಧೋರಣೆಗಳನ್ನು ನಿರರ್ಗಳವಾಗಿ ಕಾರ್ಯರೂಪವಾಗುವಂತೆ ಮಾಡಬೇಕೆಂದು ರಿಜರ್ವ ಬ್ಯಾಂಕು ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಆದೇಶವನ್ನೀಯಬೇಕು. ಸಾಧ್ಯವಿದ್ದರೆ ಇಂತಹದೇ ಆದ ಧೋರಣೆ ಇತರ ವಾಣಿಜ್ಯ ಬ್ಯಾಂಕುಗಳಿಗೂ ಅನ್ವಯವಾಗುವಂತೆ ಮಾಡಬೇಕು.

೪) ರಿಜರ್ವ ಬ್ಯಾಂಕು, ಗ್ರಾಮೀಣ ಪತ್ತಿನ ಬಗ್ಗೆ ಇರುವ ತನ್ನ ಧೋರಣೆಯನ್ನು ಬದಲಾಯಿಸಬೇಕು. ಅಂದರೆ ಒಕ್ಕಲುತನಕ್ಕೆ ಪತ್ತು ಎಂದಾಕ್ಷಣ ಹಳ್ಳಿಯಲ್ಲಿಯೇ ಬೆಳೆಯುತ್ತಿರುವ ಮತ್ತಿತರ ಉದ್ಯೋಗಗಳಿಗೆ, ಅವಕಾಶ ಕೊಡಬಾರದೆಂಬ ಅರ್ಥ ಹಚ್ಚಬಾರದು. 'ಒಕ್ಕಲುತನ' ಎಂಬ ಪದ ಹಚ್ಚವೆ 'ಗ್ರಾಮೀಣ ಔದ್ಯೋಗಿಕರಣಕ್ಕೆ' ಎಂಬ ಪದ ಹಚ್ಚಿದರೆ ಒಳಿತು. ಇದಕ್ಕಿಂತಲೂ ಮಿಕ್ಕ ಏನಾದರೂ ಬೇರೆ ಯೋಜನೆ ಒಕ್ಕಲುತನಕ್ಕೆ ಪ್ರತ್ಯೇಕ ಮಾಡಿದರೆ ಅದಕ್ಕೆ 'ಒಕ್ಕಲುತನಕ್ಕೆ' ಎಂದು ಬರೆದರೆ ಒಳಿತು. ಏಕೆಂದರೆ ಇತ್ತೀಚಿನ ಸಮೀಕ್ಷೆಯ ಪ್ರಕಾರ ಗ್ರಾಮೀಣ ಉದ್ಯೋಗವೆಂದರೆ ಬಹಳ ಮಾಡಿ ಒಕ್ಕಲುತನವೆಂದೇ ಅರ್ಥ ಹಚ್ಚಿ ಇನ್ನಿತರ ಉದ್ಯೋಗಗಳಿಗೆ ಎಷ್ಟು ಪಾಲು ಸಿಗಬೇಕೋ ಅಷ್ಟು ಸಿಕ್ಕಿಲ್ಲ. ಇದೇ ರೀತಿಯ ಮಾರ್ಗದರ್ಶನವನ್ನು ರಿಜರ್ವ ಬ್ಯಾಂಕು ನಮ್ಮ ಎಲ್ಲ ರಾಷ್ಟ್ರೀಕೃತ

ಬ್ಯಾಂಕುಗಳಿಗೆ ಕೊಟ್ಟು ಇದರಿಂದ ಆದ ಅಲಕ್ಷ್ಯವನ್ನು ತೊಡೆದು ಹಾಕಲಿ ಎಂದು ಅಭಿಪ್ರಾಯಪಡುತ್ತೇನೆ.

೫) ಇನ್ನು ಗ್ರಾಮಾಂತರ ಪ್ರದೇಶದಲ್ಲಿ ತೆರೆದ ರಾಷ್ಟ್ರೀಕೃತ ಬ್ಯಾಂಕುಗಳ ಶಾಖಾ ಮ್ಯಾನೇಜರರ ಜವಾಬ್ದಾರಿಯು ಗುರುತರವಾಗಿದೆ. ಅವರನ್ನು ಗ್ರಾಮೀಣ ಜನತೆ ಮತ್ತು ಸರಕಾರವನ್ನು ಜೋಡಿಸುವ ಕೈನು ಎಂದು ವರ್ಣಿಸಬಹುದು. ಜನತೆಯ ಕಷ್ಟನಷ್ಟಗಳನ್ನು ಮತ್ತು ಬೇಡಿಕೆಗಳನ್ನು ಚೆನ್ನಾಗಿ ಅರಿತುಕೊಂಡು ಅದನ್ನೆ ಸರಕಾರಕ್ಕೆ ತಿಳಿಯಪಡಿಸುವದಲ್ಲದೆ, ಸೂಕ್ತವಾದ ಸಲಹೆಯನ್ನು ನೀಡುವದರಲ್ಲಿ ಬ್ಯಾಂಕರನು ಹಿಂಜರಿಯಬಾರದು. ಈ ಸಲಹೆಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಸೂಕ್ತವಾದ ಧೋರಣೆಯನ್ನು ರೂಪಿಸುವಲ್ಲಿ ಸರಕಾರವು ಬ್ಯಾಂಕುಗಳ ಸಲಹೆಗಳನ್ನು ತೆಗೆದುಕೊಳ್ಳುವದನ್ನು ಮರೆಯಬಾರದಷ್ಟೇ ಇಲ್ಲ ಯಾವದೇ ತರದ ತಾತ್ಸಾರ ಭಾವನೆಯನ್ನು ತಾಳಬಾರದು.

೬) ಬ್ಯಾಂಕರನು ಬ್ಯಾಂಕಿನ ಕೆಲಸ ಅಷ್ಟೇನೂ ಪರಿಶ್ರಮವಲ್ಲದ್ದು (white collar job) ಎಂದು ತಿಳಿದು, 'ಮಾಡಿದರೆ ಕೆಟ್ಟೇನು' ಎಂಬ ವಿಚಾರವಿಟ್ಟುಕೊಳ್ಳಬಾರದು. ಮೊದಲು ಜನತೆಯೇ ಬ್ಯಾಂಕಿನ ಬಾಗಿಲಿಗೆ ಬಂದರೆ; ಈಗ ಬ್ಯಾಂಕರನೇ ಜನತೆಯ ಬಾಗಿಲನ್ನು ತಟ್ಟಿ ತೆರೆಯಿಸಬೇಕಾಗಿದೆ. ನಾನೇನು ಮಾಡಲಿ, ಜನತೆಯೇ ನನ್ನ ಹತ್ತಿರ

ಬರುತ್ತಿಲ್ಲವಲ್ಲ, ಸಾಲ ಕೇಳುತ್ತಿಲ್ಲವಲ್ಲ ಎಂದು ಹೇಳುತ್ತ ಕೂಡದೆ ಬ್ಯಾಂಕರನು ಜನರಲ್ಲಿ ಸೂಕ್ತವಾದ ಪ್ರಜ್ಞೆಯನ್ನು ಜಾಗೃತಗೊಳಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ಮಾಡಬೇಕು. ಇಲ್ಲಿ ಅವನು ಸಾಹಸಿ ಉದ್ಯಮಿಯಂತೆ ಕಾರ್ಯನಿರ್ವಹಿಸಿ, ಎಲ್ಲರೂ ಸಾಹಸಿ ಉದ್ಯಮಿಗಳಾಗುವಂತೆ ರೂಪಿಸುವ ಕಾರ್ಯ ಇಂದು ಬ್ಯಾಂಕರನು ಮಾಡಬೇಕಾಗಿದೆ.

೭) ಬ್ಯಾಂಕರನು ಕೇವಲ ಬ್ಯಾಂಕರನಾಗದೇ ಜನತೆಯ ಸನ್ಮಿತ್ರ, ಬಂಧು, ಹಿತೈಷಿ ಇಷ್ಟೇ ಅಲ್ಲ ಅವರ ಹಿತಚಿಂತಕನಾಗಿ ಕೆಲಸ ಮಾಡಬೇಕು. ಅಂದರೇನೆ ಜನರಲ್ಲಿದ್ದ ದುಗುಡ, ದುಮ್ಮಾನ, ನಾಚಿಕೆ, ಅಂಜಿಕೆ ತೊಲಗಿ ಅವರು ಮುಂದೆ ಬಂದು ರಾಷ್ಟ್ರಕಟ್ಟುವಲ್ಲಿ ಕಾರ್ಯೋನ್ಮುಖವಾಗುವದರಲ್ಲಿ ಸಂಶಯವಿಲ್ಲ. ಇದು ಸ್ವಲ್ಪ ಕಷ್ಟಕರವಾದ ಕೆಲಸವೇನೋ ಹೌದು, ಆದರೆ ಬ್ಯಾಂಕರನು ನಿರ್ಮಲ ಮನಸ್ಸಿನಿಂದ, ಸೇವಾಬುದ್ಧಿಯಿಂದ ಕಂಕಣಬದ್ಧನಾಗಿ ಟೊಂಕ ಕಟ್ಟಿ ನಿಂತರೆ ಯಾವದು ತಾನೇ ಅಸಾಧ್ಯ?

೮) ಇತ್ತೀಚಿನ ಅರ್ಥಶಾಸ್ತ್ರಜ್ಞರು ಪ್ರತಿ ಜಿಲ್ಲೆಗೂ ಒಂದು ಪತ್ತು ಸಂಯೋಜಕ ಸಮಿತಿ (Credit Co-ordination committee) ಇರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ನಿಜವಾಗಿಯೂ ಮೆಚ್ಚುವಂತಹ

ಸೂಚನೆ. ಹಣಕಾಸಿನ ಮತ್ತು ಪತ್ತಿನ ಸಂಸ್ಥೆಗಳು ಎಷ್ಟೋ ಇದ್ದರೂ ಗ್ರಾಮೀಣ ಜನತೆಗೆ ಪತ್ತು ಎಂದಾಕ್ಷಣ ಅವು ಜವಾಬ್ದಾರಿಯನ್ನು ಒಂದರ ಮೇಲೆ ಮತ್ತೊಂದು ಹಾಕುತ್ತ ನಡೆದಿರುವದನ್ನು ನಾವು ಕಾಣುತ್ತೇವೆ. ಉದಾಹರಣೆಗಾಗಿ— ಒಕ್ಕಲುತನಕ್ಕೆ ಪತ್ತು ಎಂದಾಕ್ಷಣ "ಈ ಕಾರ್ಯವು ನಮ್ಮ ಕಕ್ಷೆಯಲ್ಲಿ ಇಲ್ಲ; ಇದು ಸಹಕಾರೀ ಪತ್ತಿನ ಸಂಸ್ಥೆಗಳು ಮತ್ತು ಭೂ ಸುಧಾರಣೆ ಬ್ಯಾಂಕುಗಳು ಮಾಡಬೇಕಾದಂಥ ಕೆಲಸ" ಎಂದು ಹೇಳಿ ವಾಣಿಜ್ಯ ಬ್ಯಾಂಕುಗಳು ಪಾರಾದರೆ; 'ಸಹಕಾರಿ ಪತ್ತಿನ' ಮತ್ತು 'ಭೂ ಸುಧಾರಣೆ' ಬ್ಯಾಂಕುಗಳು "ನಾವು ಸುಧಾರಣೆಯ ಸಲುವಾಗಿ ಮಾತ್ರ ಪತ್ತು ಅಥವಾ ಸಾಲ ಕೊಡುವವರು. ದಿನ ನಿತ್ಯ ಬೇಕಾಗುವ ದುಡಿಯುವ ಬಂಡವಾಳ ಸಲುವಾಗಿ ನಮಗೆ ಕೊಡಲು ಬರುವದಿಲ್ಲ" ಎಂದು ಹೇಳುತ್ತಿವೆ. ಇಷ್ಟೇ ಅಲ್ಲ ಇವೆಲ್ಲ ಗ್ರಾಮೀಣ ಸುಧಾರಣೆಯ ಸಲುವಾಗಿ ಹುಟ್ಟಿಕೊಂಡರೂ ಅವು ಕೊಟ್ಟ ಸಾಲ ಅಥವಾ ಪತ್ತು ಅದು ಕೇವಲ ಒಕ್ಕಲುತನಕ್ಕೇ ಸೀಮಿತವಾಗಿದೆ ಎಂದು ಹೇಳಬಹುದು. ಈ ಪಲಾಯನ ಪ್ರವೃತ್ತಿ ಹೋಗಲಾಡಿಸುವ ಸಲುವಾಗಿ ಇಂತಹ ಸಂಯೋಜಕ ಸಮಿತಿ ಮುಖ್ಯವಾಗಿ ಬೇಕೇ ಬೇಕು. ಏಕೆಂದರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿರ್ಮಿಸಲ್ಪಡುವ ಈ ಸಮಿತಿ ಜಿಲ್ಲೆಗೆ ಬೇಕಾದ ಒಟ್ಟು ಪತ್ತಿನ ಮೊತ್ತವನ್ನು ಆ ಜಿಲ್ಲೆಗೆ ಸೀಮಿತವಾದ ಹಣಕಾಸಿನ ಸಂಸ್ಥೆಗಳಿಗೆ ಹಂಚಿಕೊಟ್ಟು ಜವಾಬ್ದಾರಿಯನ್ನು ನಿಗದಿಪಡಿಸುವದ

ರಿಂದ ಅವು ಒಬ್ಬರ ಮೇಲೆ ಒಬ್ಬರು ಹಾಕುವ ಪ್ರವೃತ್ತಿ ನಿಲ್ಲುವದು. ಮತ್ತು ಇದರಿಂದ ತ್ವರಿತಗತಿಯ ಪ್ರಗತಿ ಸಾಧ್ಯ. ಮತ್ತು ಪತ್ತಿನ ಧೋರಣೆ ನಿರೂಪಿಸುವಲ್ಲಿ ಬರುವ ಅಡ್ಡಿ ಆತಂಕಗಳನ್ನು ತೊಡೆದು ಹಾಕಲು ಬರುವದು. ಕಾರಣ ಜಿಲ್ಲೆಗೆ ಒಂದರಂತೆ ಪತ್ತಿನ ಸಂಯೋಜಕ ಸಮಿತಿಗಳು ನಿಯುಮಿಸಲ್ಪಡಬೇಕು. ಈ ದಿಶೆಯಲ್ಲಿ ಸುಧಾರಣೆ ನಡೆದರೂ ಅಷ್ಟೊಂದು ಹೇಳಿಕೊಳ್ಳುವ ಸುಧಾರಣೆ ಯಾಗಿಲ್ಲ.

ಇಷ್ಟೇ ಅಲ್ಲದೆ ನನ್ನ ಅಭಿಪ್ರಾಯದಂತೆ, ಇದೇ ರೀತಿಯ ಸಂಯೋಜಕ ಸಮಿತಿಗಳು ಜಿಲ್ಲೆಗೊಂದಾಗುವ ದಲ್ಲದೆ ಪ್ರತಿ ತಾಲೂಕಿಗೊಂದು ಮತ್ತು ಸಾಧ್ಯವಿದ್ದರೆ ಹಳ್ಳಿ ಗೊಂದರಂತೆ ಆಗುವದು ಒಳಿತು. ಏಕೆಂದರೆ ಸಮಸ್ಯೆ ಗಳನ್ನು ಹಂತ ಹಂತವಾಗಿ ಬಿಡಿಸಲು ಸಾಧ್ಯವಾಗುವದು. ಆಯಾ ಮಟ್ಟದಲ್ಲಿ ಆಯಾ ವಲಯದ ಮುಖ್ಯಸ್ಥರನ್ನೂ ಅವರ ವ್ಯಾಪ್ತಿಗೆ ಬರುವ ಎಲ್ಲ ಹಣಕಾಸು ಸಂಸ್ಥೆಗಳ ಮ್ಯಾನೇಜರರನ್ನೂ, ಒಕ್ಕಲಿಗರನ್ನೂ ಮತ್ತು ಸರಕಾರದ ಇನ್ನಿತರ ಸಂಬಂಧಪಟ್ಟ ವಿಭಾಗಗಳನ್ನೊಳಗೊಂಡ ಹಳ್ಳಿಗೆ ಸೀಮಿತ, ತಾಲೂಕಿಗೆ ಸೀಮಿತ ಮತ್ತು ಜಿಲ್ಲೆಗೆ ಸೀಮಿತವಾದ ಪತ್ತಿನ ಸಂಯೋಜಕ ಸಮಿತಿಗಳು ಹುಟ್ಟಿ ಬರಬೇಕು. ಇವು ಆಯಾ ಭಾಗದ ಸರ್ವಾಂಗೀಣ ಉನ್ನತಿಯ ಸಲುವಾಗಿ ಯೋಜನೆಗಳನ್ನು ಹಾಕಿಕೊಂಡು ತ್ವರಿತಗತಿಯಿಂದ ಕಾರ್ಯ ಗತವಾಗುವಂತೆ ಹೆಣಗಾಡಬೇಕು.

೯) ಗ್ರಾಮಾಂತರ ಪ್ರದೇಶದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳು ಸರಕಾರದ ಸಂಬಂಧಪಟ್ಟ ಖಾತೆಯ ಸಹಕಾರದಿಂದ ತಮ್ಮ ವಲಯದಲ್ಲಿ ಬರುವಂತಹ ಸಾಮಾಜಿಕ ಆರ್ಥಿಕ ಸಮೀಕ್ಷೆ (Socio-Economic Survey) ಯನ್ನು ಕೈಕೊಂಡು ಸಮೀಕ್ಷೆಯ ಪ್ರಕಾರ ಪತ್ತಿನ ಧೋರಣೆ, ಠೇವಣಿ ಸ್ವೀಕಾರದಲ್ಲಿ ಮಾರ್ಪಾಡುಗಳನ್ನು ಮಾಡಬೇಕು. ಏಕೆಂದರೆ ಈ ಬ್ಯಾಂಕುಗಳು ಕೈಕೊಳ್ಳುವಂತಹ ಸಮೀಕ್ಷೆ ಅತೀ ಸತ್ಯವಾದ ಸಮೀಕ್ಷೆಯೇ ಸರಿ. ಈ ದಿಶೆಯಲ್ಲಿ ಅಲ್ಪ ಸ್ವಲ್ಪ ಕೆಲಸ ನಡೆದರೂ ಅದು ತೃಪ್ತಿಕರವಾಗಿಲ್ಲ ಎಂದು ಹೇಳಬಹುದು. ಇದನ್ನು ಇನ್ನೂ ತೀಕ್ಷ್ಣಗೊಳಿಸಬೇಕು.

೧೦) ಬ್ಯಾಂಕರನು ಹಳ್ಳಿಯ ಜನರೊಡನೆ ಬೆರೆತು ಅವರಲ್ಲಿಯೇ ಹಾಸುಹೊಕ್ಕಾಗಬೇಕು. ಹಳ್ಳಿಯ ಜನರಲ್ಲಿರುವ ಕೀಳು ಹಿರಿಮೆಯನ್ನು ಕಿತ್ತೊಗೆದು ಈ ಬ್ಯಾಂಕು ತನ್ನ ಅಭ್ಯುದಯದ ಹಾದಿಯನ್ನು ತೋರಿಸಲು ಬಂದಿದೆ. ಅದರ ಉಪಯೋಗವನ್ನು ತಾನು ಹೇಗೆ ತೆಗೆದುಕೊಳ್ಳಬೇಕು ಎಂಬುದರ ಅರಿವಾಗುವಂತೆ ಬ್ಯಾಂಕರನು ಪ್ರಯತ್ನಿಸಬೇಕು.

೧೧) ಸಾಲಕೊಟ್ಟನಂತರ ಸಾಲಕೇಳುವದೊಂದೇ ಬ್ಯಾಂಕರನ ಆದ್ಯ ಕರ್ತವ್ಯವಾಗಬಾರದು. ಕೊಟ್ಟಂಥ ಸಾಲ ಸರಿಯಾಗಿ ವಿನಿಯೋಗಿಸಿದೆಯೋ ಹೇಗೆ ಅದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸಕೊಡಹತ್ತಿದೆ, ಅದರ

ಲ್ಲಿದ್ದ ಲೋಪದೋಷಗಳಾವವು, ಅವುಗಳನ್ನು ತಿದ್ದುವ ಬಗೆ, ತಿದ್ದಲು ಹೊರಟರೆ ಇನ್ನೂ ಹಣದ ಕೊರತೆ ಆಗುವದೇ ಹೇಗೆ, ಒಂದು ವೇಳೆ ಹೆಚ್ಚಿನ ಬಂಡವಾಳ ಬೇಕಾದರೆ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ಅದು ಮುಗಿಯುವಂತೆ ಮಾಡಿದರೇನೇ ಸಾರ್ಥಕ ಎಂಬುದರ ಪ್ರಜ್ಞೆ ಬ್ಯಾಂಕರನಿಗೆ ಬೇಕು. ಎಷ್ಟೋ ಉದಾಹರಣೆಗಳನ್ನು ನೋಡುತ್ತೇವೆ. ಕೆಲಸವೆಲ್ಲವೂ ಮುಗಿದು ಇನ್ನು ಪ್ರತಿ ಶತ ೧೦ ರಷ್ಟು ಉಳಿದಿರುತ್ತದೆ. ಪರಂತು ಕೈಯಲ್ಲಿಯ ಬಂಡವಾಳ ತೀರಿ ಎಷ್ಟು ಪ್ರಯತ್ನಿಸಿದರೂ ಹಣಕಾಸಿನ ವ್ಯವಸ್ಥೆಯಾಗದೆ ಕೆಲಸ ಅರ್ಧಕ್ಕೆ ನಿಂತು ದಿವಸಗಳೆಯುತ್ತದೆ. ದಿವಸಗಳೆದಂತೆಲ್ಲ ನೂರೆಂಟು ಸಮಸ್ಯೆಗಳು ಮುತ್ತಿಗೆ ಹಾಕುತ್ತವೆ. ಅಂದರೆ ಸಾಲಗಾರರ ಸಾಲ, ಅದರ ಮೇಲಿನ ಬಡ್ಡಿ, ಚಕ್ರಬಡ್ಡಿ ಇತ್ಯಾದಿ ಕೊಡಬೇಕೆಂದರೆ ಅದರ ಮೇಲಿನ ಉತ್ಪನ್ನ ಶೂನ್ಯವಿರುವದು. ಏಕೆಂದರೆ ಅದು ಪೂರ್ಣ ಮುಗಿಯದೆ ಅದರ ಮೇಲೆ ಉತ್ಪನ್ನ ಹುಟ್ಟಿಸುವದು ಸಾಧ್ಯವಾಗುವದಿಲ್ಲ. ಹೀಗಾಗಿ ಸಾಲ ತೀರಿಸುವ ಸಲುವಾಗಿ ಇನ್ನುಳಿದ ಆಸ್ತಿಯನ್ನು ಮಾರಿ ತೀರಿಸದ ಉದಾಹರಣೆಗಳು ಎಷ್ಟಿಲ್ಲ? ಆದ್ದರಿಂದ ಹಂತ ಹಂತಗಳಲ್ಲಿ ಕಾರ್ಯದ ಬೆಳವಣಿಗೆಯನ್ನು ವೀಕ್ಷಿಸುತ್ತಾ ಹೋದರೆ ಒಳಿತು. ಮುಂದೆ ಸ್ವಲ್ಪ ಹಣದ ಕೊರತೆ ಬಿದ್ದಾಗ ಅದನ್ನು ತುಂಬಲು ಬ್ಯಾಂಕರನು ಹಿಂಜರಿಯಬಾರದು. ಅಂದರೇನೇ ಕೊಟ್ಟ ಸಾಲ ಸಾರ್ಥಕವಾಗುವದರಲ್ಲಿ ಸಂಶಯವೇ ಇಲ್ಲ.

೧೨) ಬ್ಯಾಂಕರನು ತನ್ನ ಬ್ಯಾಂಕ ವ್ಯವಹಾರ ಕೌಶಲ್ಯದಿಂದ ಸಾಧ್ಯವಿದ್ದಷ್ಟು ಸಾಲಗಾರರನ್ನು ಇತರ ಸಾಲಗಳಿಂದ ಋಣಮುಕ್ತರಾಗುವಂತೆ ಪ್ರಯತ್ನಿಸಬೇಕು. ಏಕೆಂದರೆ ನೂರೆಂಟು ಸಾಲವನ್ನು ಮಾಡಿದ ಮನುಷ್ಯ ಸಾಲದ ಬಡ್ಡಿ, ಅದನ್ನು ಹಿಂದೆ ತಿರುಗಿಸುವದರ ಬಗ್ಗೆಯೇ ವಿಚಾರಿಸುವನು ವಿನಃ ಕೈಯಲ್ಲಿ ತೆಗೆದುಕೊಂಡ ಕೆಲಸದ ಬಗ್ಗೆ ವಿಚಾರ ಮಾಡನು. ಒಂದೊಂದು ಹಳೆಯ ಸಾಲ ವನ್ನು ತೀರಿಸಲು ಹೊಸ ಸಾಲವನ್ನು ಮಾಡಬೇಕಾಗುತ್ತದೆ. ಹಾಗೆ ಆಗದಂತೆ ಬ್ಯಾಂಕರನು ನೋಡಿಕೊಳ್ಳಬೇಕು. ಸಾಧ್ಯವಿದ್ದರೆ ಇತರ ಸಾಲವನ್ನು ತೀರಿಸಿ ಹಣ ಒದಗಿಸುವ ಏಕಮಾತ್ರ ಸಂಸ್ಥೆಯಂತೆ ಕಾರ್ಯ ಮಾಡಬೇಕು. ಈ ದಿಶೆಯಲ್ಲಿ ಬ್ಯಾಂಕರನು ಸಾಲಗಾರನ ಬಗ್ಗೆ ಆಳವಾದ ಅಭ್ಯಾಸ ಮಾಡಿ ಅವನಿಗೆ ಶಕ್ತಿಮೀರಿ ಸಹಾಯ ಮಾಡಲು ಪ್ರಯತ್ನಿಸಬೇಕು.

ಹೀಗೆ ರಾಷ್ಟ್ರೀಕೃತ ಬ್ಯಾಂಕುಗಳು ಮೇಲಿನ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡರೆ ಮತ್ತು ಅದ ರಂತೆ ನಡೆದರೆ ಗ್ರಾಮಾಂತರ ಪ್ರದೇಶದಲ್ಲಿ ಬ್ಯಾಂಕುಗಳನ್ನು ತೆರೆದ ಉದ್ದೇಶ ಫಲಕಾರಿಯಾಗುವದರಲ್ಲಿ ಸಂಶಯವಿಲ್ಲ. ಇವುಗಳನ್ನು ಗಮನಿಸುವದರಲ್ಲಿ ಕೆಲವೊಂದು ಅಡ್ಡಿ ಆತಂಕ ಗಳು ಬರಬಹುದು. ಅಂತಹವುಗಳನ್ನು ಸೂಕ್ತವಾದ ಬದಲಾವಣೆಯೊಂದಿಗೆ ಆಯಾ ಜನಕ್ಕೆ ಸಹಾಯವಾಗುವಂತೆ

ಬದಲಾವಣೆ ಮಾಡಿದರೆ ತಪ್ಪೇನೂ ಅಲ್ಲ. ಒಟ್ಟಿನ ಮೇಲೆ ಬ್ಯಾಂಕಿನ ಧೋರಣೆ, ಕಾಯಿದೆ, ನಿಯಮಾವಳಿಗಳು ಜನರ ಹಿತವನ್ನೇ ಬಯಸಬೇಕೇ ವಿನಃ ಅವು ಬರಿಯ ಕಾಯ್ದೆಯಾಗಿ ಉಳಿಯಬಾರದು.

——

ಸಹಾಯಕ ಗ್ರಂಥಗಳು ಮತ್ತು ನಿಯತ ಕಾಲಿಕಗಳು

1 ಬ್ಯಾಂಕುಗಳ ರಾಷ್ಟ್ರೀಕರಣ
—ಪ್ರಧಾನ ಮಂತ್ರಿಗಳ ವಿಚಾರಧಾರೆ

2 ಮೈಸೂರ ಎಕೋನಮಿಕ್ ರೀವ್ಯೂ
(Mysore Economic Review)
Bank Special, November, 1975

3 Commerce, July, 1973

4 Southern Economist March, 1975

5 Banking in India, 12th Edition
—S. G. Panandikar
—D. M. Mithani

6 Survey of Money and Banking
by : Prof. Malhotra

7 ಭಾರತೀಯ ಬ್ಯಾಂಕಿಂಗ ಮತ್ತು ಕರೆನ್ಸಿ ವ್ಯವಸ್ಥೆ
—ಎನ್. ಚಂದ್ರಶೇಖರಯ್ಯ

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

ಬೆಲೆ: ಪ್ರತಿ ಒಂದಕ್ಕೆ ೨೫ ಪೈಸೆ

೧. ಅನುಭವ ಮಂಟಪದ ಶಿವಶರಣೆಯರು
— ಶಶಿಕಲಾ ಮೋಳ್ದಿ

೨. ಕಬ್ಬು —ಎಂ. ರಾಮದಾಸ್ ಕಾಮತ್

೩. ಕುಂಟುತ್ತಿರುವ ಕೈಮಗ್ಗದ ಉದ್ದಿಮೆ
— ಈರಣ್ಣ ಹಟ್ಟಿ

೪. ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು
— ಬಿ. ಎಸ್. ನಂದ್ಯಾಳ

೫. ಪಂಚತಂತ್ರದ ಕಥೆಗಳು —ವರದರಾಜ ಹುಯಿಲಗೋಳ

೬. ಪಂಪಕವಿ ಚಿತ್ರಿಸಿದ ಭೀಷ್ಮರು — ಬಿ. ಸಿ. ಜವಳಿ

೭. ಮದುವೆ ಮತ್ತು ಮಹಿಳೆ — ನೀಲಮ್ಮ ಕತ್ನಳ್ಳಿ

೮. ವೀರಶೈವಾಮೃತ ಮಹಾಪುರಾಣ
— ಕಾಶೀಪುಟ್ಟಸೋಮಾರಾಧ್ಯ

೯. ದನಗಳ ರೋಗಗಳು ಹಾಗು
ಅವುಗಳನಿವಾರಣೋಪಾಯಗಳು —ರಾಮರಾವ ಜ್ಯೋತಿ

೧೦. ಕವಯಿತ್ರಿ ಮಹಾದೇವಿ ವರ್ಮಾ
— ಎಸ್. ಜಿ. ಇಟಗಿ

ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩